ಸಂಪುಟ: 01 VOLUVE 01 | ಸಂಚಿಕೆ: 47 ISSUE: 47 | ಪುಟ: 06 PAGE: 06 | ಶುಕ್ರವಾರ 28-08-2026 FRIDAY 28-08-2026

VD

REG-PRGI NO KNKAN/26/A5239 ಮೋ: 9880010077
vkbharath25@gmail.com

# ವಿಜಯ ದುಂಬಿ

VIJAYA DUMBI KANNADA DAILY

ವಿಶ್ವಾಸದ ಕನ್ನಡಿ

ಕನ್ನಡ ದಿನಪತ್ರಿಕೆ

Rs.3/-

2 ಮೇಕೆದಾಟು ಶಂಕುಸ್ಥಾಪನೆಗೆ 6-8 ತಿಂಗಳ ಗಡುವು ತಮಿಳುನಾಡು ಬೆಂಬಲದೊಂದಿಗೆ ಯೋಜನೆಗೆ ನಿರ್ಧಾರ

4 ಪ್ರವಾಹದಿಂದ ನೇಪಾಳ ತತ್ತರ : ಸಾವಿನ ಸಂಖ್ಯೆ 165ಕ್ಕೆ ಏರಿಕೆ, 823 ಮಂದಿ ನಾಪತ್ತೆ, ನೆರವಿಗೆ ನಿಂತ ಭಾರತ

6 ಸಂಪುಟ ಸರ್ಜರಿ:ದೆಹಲಿಗೆ ಸಿಎಂ

## ಸಂಚಾರಕ್ಕೆ ತಗ್ಗುಗುಂಡಿ ಸಂಕಷ್ಟ, ಹಾಲಾಪೂರ-ಕವಿತಾಳ ಮಾರ್ಗಕ್ಕೆ ಮುಕ್ತಿ ಯಾವಗ?

ವಿಜಯ ದುಂಬಿ ಸುದ್ದಿ....

ಹಾಲಾಪೂರ: ನಿಂದ ಕವಿತಾಳಗೆ ಕಲ್ಪಿಸುವ ಮುಖ್ಯ ರಸ್ತೆಯು ಸಂಪೂರ್ಣವಾಗಿ ತಗ್ಗು ಗುಂಡಿಗುಂಡಿಗಳಿಂದ ಕೂಡಿದ್ದು ನಿತ್ಯ ಸಂಚರಿಸುವ ಪ್ರಯಾಣಿಕರು, ವಾಹನ ಸವಾರರು,ಶಾಲಾ ವಾಹನಗಳು ಜೀವವನ್ನು ಅಂಗೈಯಲ್ಲಿ ಹಿಡಿದುಕೊಂಡು ಪ್ರಯಾಣಿಸುವ ಸಂದರ್ಭ ಒದಗಿಬಂದಿದೆ,



ವರ್ಷಗಳಿಂದ ಇದೆ ಹಣಿಬರಹ,ಪ್ರತಿವರ್ಷ ರಸ್ತೆ ಸುಧಾರಿಸಲು ಕೋಟಿ ಕೋಟಿ ಹಣ ಖರ್ಚು ಮಾಡುತ್ತಾರೆ ಆದರೆ ತಗ್ಗು ಗುಂಡಿ ಮಾತ್ರ ಹಾಗೆ ಇರುತ್ತವೆ, ಈ ರಸ್ತೆಯು ರಾಯಚೂರು, ಮಾನ್ವಿ ಪಟ್ಟಣಕ್ಕೆ ಸಂಪರ್ಕ ಹೊಂದಿದ್ದು,ನೂರಾರು ವಾಹನಗಳು ಸಂಚಾರ,ಇದರಿಂದ ಧೂಳು ಮತ್ತು ಅಪಾಯದಿಂದ ಕೂಡಿದ್ದು,ಮಳೆಗಾಲದಲ್ಲಿ ನೀರುನಿಂತು ಅದರ ಕತೆ ಹೇಳತಿರದು, ರೈತರು ಕೃಷಿ ಚಟುವಟಿಕೆಗಳಿಗೆ ಹೊಲಗದ್ದೆಗಳಿಗೆ ತೆರಳು ತುಂಬಾ ಸಂಕಷ್ಟ, ಸಂಬಂಧಿಸಿದ ಲೊಕೊಪಯೋಗಿ ಅಧಿಕಾರಿಗಳು ಮತ್ತು ಜನಪ್ರತಿನಿದಿಗಳು ಸೂಕ್ತ ಗಮನಹರಿಸುವ ಕೆಲಸ ಮಾಡದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಈಗಲಾದರೂ ಅಪಾಯ ಹಾಗುವ ಮುನ್ನ ಉಪಾಯ ಮಾಡಿ ತಗ್ಗು ಗುಂಡಿ ಮುಚ್ಚುವ ಕೆಲಸ ಮಾಡಬೇಕೆಂದು ಜನರ ಆಶಯವಾಗಿದೆ.

## ಸಂಭ್ರಮ ಸಡಗರದ ಈದ್ ಮಿಲಾದ್ ನ ಆಕರ್ಷಕ ಮೆರವಣಿಗೆ

ವಿಜಯ ದುಂಬಿ ಸುದ್ದಿ....

ಲಿಂಗಸಗೂರು: ಶಾಂತಿ ಸಂದೇಶ ಸಾರಿದ ಪ್ರವಾದಿ ಮಹಮ್ಮದ್ ಅವರ ಜನ್ಮದಿನವನ್ನು ಈದ್ ಮಿಲಾದ್, ಮೀಲಾದುನ್ನಬಿಯಾಗಿ ಪಟ್ಟಣದಲ್ಲಿ ಮುಸ್ಲಿಂ ಸಮುದಾಯ ಸಂಭ್ರಮ ಸಡಗರದಿಂದ ಹಬ್ಬ ಆಚರಿಸಿದರು.



ಪಟ್ಟಣದ ಮಸೀದಿಯಿಂದ ಪ್ರಾರಂಭವಾದ ಮೆರವಣಿಗೆ ಗೌಳಿಪುರ, ಹನುಮಾನ ಚಾಕ್ ಗಡಿಯಾರ ವೃತ್ತ, ಚಾವಸ್ ಗಲ್ಲಿ, ಅಂಬೇಡ್ಕರ್ ವೃತ್ತ ನಂತರ ಪುನಃ ಮಸೀದಿಗೆ ಬಂದು ಸಮಾಪ್ತಿ ಗೊಳಿಸಿದರು . ಮೆಕ್ಕಾ,ಮದೀನಾದ ಪವಿತ್ರ ಸ್ಮಾರಕಗಳ ಪ್ರತಿಕೃತಿಗಳು ಮೆರವಣಿಗೆಯ ಆಕರ್ಷಣೆಯ ಬಿಂದುಗಳಾಗಿದ್ದವು. ರಸ್ತೆಯ ಇಕ್ಕೆಲದಲ್ಲಿ ನೆರೆದಿದ್ದ ಮಕ್ಕಳು, ಮಹಿಳೆಯರು ಮೆರವಣಿಗೆಯ ಸೊಬಗು ಕಣ್ತುಂಬಿ ಕೊಂಡರು. ಯುವಕರ ದಂಡು ಭಾರೀ ಸಂಖ್ಯೆಯಲ್ಲಿ ನೆರೆದಿತ್ತು. ಬೈಕ್‌ಗೆ ಹಸಿರು ಬಾವುಟ ಕಟ್ಟಿಕೊಂಡು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಅಲ್ಲಲ್ಲಿ ಹಸಿರು ಬ್ಯಾನರ್, ಬಂಟಿಂಕ್ಸ್ ಗಳು ರಾರಾಜಿಸುತ್ತಿದ್ದವು. ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಮುಖಂಡರಾದ ಖಾದರಭಾಷ, ಫಯಾಜ್ ಅಹ್ಮದ ಮನಿಯಾರ್, ಮಹ್ಮದ ರಫಿ, ಬಾಬಾ ಖಾಜಿ, ಬಾಬಾ ಜಾನಿ, ಮಹ್ಮದ್ ಹನೀಸ್, ಝುಫರ್ ಹುಸೇನ್ ಫೂಲ್ ವಾಲೆ, ಇಬ್ರಾಹಿಂ, ಮಹ್ಮದ್ ಝುಹಿರುದ್ದೀನ್, ಅನೀಷ್ ಪಾಷಾ, ರೌಫ್ ಗ್ಯಾರಂಟಿ, ಮಹ್ಮದ್ ಕೆಎಫ್‌ಸಿ ಸೇರಿದಂತೆ ನೂರಾರು ಸಮಾಜದ ಮುಖಂಡರು ಹಾಗೂ ಭಕ್ತರು ಇದ್ದರು.

# ನೇಪಾಳ ಪ್ರವಾಹದ ಬೆನ್ನಲ್ಲೇ ಬಿಹಾರ ಸರ್ಕಾರ ಹೈಅಲರ್ಟ್:

# ಗಂಡಕ್ ಬ್ಯಾರೇಜ್‌ನ ಎಲ್ಲಾ 36 ಗೇಟ್ ಓಪನ್

**ಪಾಟ್ನಾ, ಆ.27- ನೇಪಾಳ ಮತ್ತು ಟಿಬೆಟ್ ಗಡಿ ಭಾಗದಲ್ಲಿ ಸಂಭವಿಸಿದ ಹಠಾತ್ ಪ್ರವಾಹದ ಅಲೆ ಗಂಡಕ್ ನದಿ ವ್ಯವಸ್ಥೆಯನ್ನು ಪ್ರವೇಶಿಸಿರುವ ಹಿನ್ನೆಲೆಯಲ್ಲಿ, ಬಿಹಾರ ಸರ್ಕಾರ ತೀವ್ರ ಮುನ್ನೆಚ್ಚರಿಕೆ ಕ್ರಮವಾಗಿ ವಾಲ್ಮೀಕಿನಗರದಲ್ಲಿರುವ ಗಂಡಕ್ ಬ್ಯಾರೇಜ್‌ನ ಎಲ್ಲಾ 36 ಗೇಟ್‌ಗಳನ್ನು ತೆರೆದಿದೆ.**

ಟಿಬೆಟ್‌ನಲ್ಲಿ ಸಂಭವಿಸಿದ ಭೂಕಂಪನದಿಂದ ಹಿಮನದಿ ಸ್ಫೋಟಗೊಂಡು ಉಂಟಾದ ಭೀಕರ ಪ್ರವಾಹದಲ್ಲಿ ನೇಪಾಳದಲ್ಲಿ 150ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, 133 ಭಾರತೀಯರು ಸೇರಿದಂತೆ 750ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ಈ ದುರಂತದ ಹಿನ್ನೆಲೆಯಲ್ಲಿ ನೆರೆ ರಾಜ್ಯ



ಬಿಹಾರದ ನದಿಪಾತ್ರದ ಜಿಲ್ಲೆಗಳಲ್ಲೂ ಆತಂಕದ ವಾತಾವರಣ ನಿರ್ಮಾಣವಾಗಿದೆ. ರಾತ್ರಿ 11 ಗಂಟೆಯ ವೇಳೆಗೆ ಬ್ಯಾರೇಜ್‌ನಿಂದ ಸುಮಾರು 1.50 ಲಕ್ಷ ಕ್ಯೂಸೆಕ್ ನೀರನ್ನು ಹೊರಬಿಡಲಾಗಿದ್ದು, ಇದು ದಿನದ ಗರಿಷ್ಠ ಹೊರಹರಿವಾಗಿದೆ. ಸದ್ಯ ನೀರಿನ ಹರಿವು ಕ್ರಮೇಣ ಕಡಿಮೆಯಾಗುವ ನಿರೀಕ್ಷೆಯಿದೆ.

ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹಾಗೂ ಮುಖ್ಯ ಕಾರ್ಯದರ್ಶಿ ಪ್ರತ್ಯಯ ಅಮತ್ ತುರ್ತು ಸಭೆ ನಡೆಸಿ, ಗಡಿ ಜಿಲ್ಲೆಗಳ ಅಧಿಕಾರಿಗಳಿಗೆ 24 ಗಂಟೆಯೂ ನಿಗಾ ವಹಿಸುವಂತೆ ಸೂಚಿಸಿದ್ದಾರೆ.ಪಶ್ಚಿಮ ಚಂಪಾರಣ್, ಪೂರ್ವ ಚಂಪಾರಣ್, ಗೋಪಾಲ್‌ಗಂಜ್,

6ನೇ ಪುಟಕ್ಕೆ

# ಪ್ರತಿ ಟನ್ ಕಬ್ಬಿಗೆ 900ರೂ ಹೆಚ್ಚುವರಿ ಬೆಲೆ ನೀಡಿ

# ಶರಣಬಸಪ್ಪ ಮಮಶೆಟ್ಟಿ ಆಗ್ರಹ




ವಿಜಯ ದುಂಬಿ ಸುದ್ದಿ....

**ಕಲಬುರಗಿ: ರಾಜ್ಯ ಸರ್ಕಾರ ತಕ್ಷಣವೇ ರಾಜ್ಯ ಸಮೂಹ ಬೆಲೆ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಪ್ರತಿ ಟನ್ ಕಬ್ಬಿಗೆ 900 ಹೆಚ್ಚುವರಿ ಬೆಲೆ ಘೋಷಿಸಬೇಕು ಹಾಗೂ ರೈತರಿಗೆ ಸೂಕ್ತ ಬೆಂಬಲ ಬೆಲೆ ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಶರಣಬಸಪ್ಪ ಮಮಶೆಟ್ಟಿ ಆಗ್ರಹಿಸಿದ್ದಾರೆ.**

ಕಲಬುರಗಿಯಲ್ಲಿ ನಡೆದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸಕ್ಕರೆ ಕಾರ್ಖಾನೆಗಳ ಮುಖ್ಯ ದ್ವಾರದಲ್ಲೇ ತೂಕದ ಮಾಪನ (ವೇ ಬ್ರಿಜ್) ಅಳವಡಿಸಿ, ರೈತರ ಸಮ್ಮುಖದಲ್ಲೇ ಕಬ್ಬಿನ ವಾಹನಗಳನ್ನು ತೂಕ ಮಾಡಿ ಕಾರ್ಖಾನೆಯೊಳಗೆ ಬಿಡಬೇಕು ಎಂದು ಒತ್ತಾಯಿಸಿದರು.

ರೈತರ ದುಸ್ಥಿತಿ ಮತ್ತು ಕಳಕಳಿ: ಸಕ್ಕರೆ ಮತ್ತು ಬೆಲ್ಲದ ಬೆಲೆ ದಿಢೀರ್ ಏರಿಕೆಯಾಗಿದ್ದರೂ, 12 ತಿಂಗಳು ರಸಗೊಬ್ಬರ ಉಣಿಸಿ ಕಷ್ಟಪಟ್ಟು ಬೆಳೆದ ಕಬ್ಬು ಬೆಳೆಗಾರರ ಬೆಂಬಲ ಬೆಲೆ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಿಂತಿಸುತ್ತಿಲ್ಲ.

ಭೀಕರ ಬರಗಾಲ, ಅಂತರ್ಜಲ ಕುಸಿತ ಹಾಗೂ ಮುಂಗಾರು ಕೈಕೊಟ್ಟಿದ್ದರೂ ಸರ್ಕಾರಗಳು ಜಾಣ ಕುರುಡು ಪ್ರದರ್ಶಿಸುತ್ತಿರುವುದು ರೈತ ವಿರೋಧಿ ನೀತಿಯಾಗಿದೆ. "ಸಿಹಿ ಬೆಳೆದು ಕಹಿ ಉಣ್ಣುವ ಪರಿಸ್ಥಿತಿ ಕಬ್ಬು ಬೆಳೆಗಾರರದ್ದಾಗಿದೆ. 'ಮಂಡಿಯುದ್ದ ಕಬ್ಬು, ಎದೆಯುದ್ದ ಸಾಲ' ಎಂಬಂತಾಗಿ ಕೃಷಿ ಮಾಡುವುದೇ ಶಾಪವಾಗಿ ಪರಿಣಮಿಸಿದೆ. ಈ ಕಾರಣದಿಂದ ಯುವ ರೈತರಿಗೆ ಹೆಣ್ಣು ಕೊಡಲು ಯುವತಿಯರು ಮುಂದೆ ಬರುತ್ತಿಲ್ಲ. ಕಬ್ಬು ಬೆಳೆಯಲು ಪ್ರತಿ ಟನ್ ಗೆ ?3,500 ಖರ್ಚಾಗುತ್ತಿದ್ದು, ನಮಗೆ ನಮ್ಮ ಬೆವರಿನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಬೇಕು" ಎಂದು ಮಮಶೆಟ್ಟಿ ಕಳವಳ ವ್ಯಕ್ತಪಡಿಸಿದರು. ಗುಜರಾತ್‌ನಲ್ಲಿ ಪ್ರತಿ ಟನ್ ಕಬ್ಬಿಗೆ 4,400, ಪಂಜಾಬ್‌ನಲ್ಲಿ 3,800 ಹಾಗೂ ಬೆಳಗಾವಿಯ ಕೆಲವು ಕಾರ್ಖಾನೆಗಳು 3,500ಕ್ಕೂ ಹೆಚ್ಚು ನೀಡುತ್ತಿವೆ.

ಸುಪ್ರೀಂ ಕೋರ್ಟ್ ನ ಐವರು ನ್ಯಾಯಾಧೀಶರ ಪೀಠದ ಆದೇಶದಂತೆ ರಾಜ್ಯ ಸರ್ಕಾರ ಕಬ್ಬಿಗೆ ಖಂಕ ನಿಗದಿಪಡಿಸಲು ಸಂಪೂರ್ಣ ಅವಕಾಶವಿದೆ ಎಂದು ಅವರು ನೆನಪಿಸಿದರು.

**ಪ್ರಮುಖ ಬೇಡಿಕೆಗಳು:** ನ್ಯಾಯಯುತ ಬೆಲೆ: ಸಕ್ಕರೆ ಇಳುವರಿ ಆಧಾರದಲ್ಲಿ ಪ್ರತಿ ಟನ್ ಕಬ್ಬಿಗೆ ?5,000 ಬೆಲೆ ಹಾಗೂ ಡಾ. ಎಂ.ಎಸ್. ಸ್ವಾಮಿನಾಥನ್ ವರದಿಯಂತೆ ಬೆಂಬಲ ಬೆಲೆ ನಿಗದಿಪಡಿಸಬೇಕು. ಉಪಉತ್ಪನ್ನಗಳ ಲಾಭಾಂಶ: ಮೊಲಾಸಸ್, ಎಥ-'ನಾಲ್, ಬಗಾಸಸ್, ವಿದ್ಯುತ್ ಹಾಗೂ ಬಯೋ-ಕಾಂಪೋಸ್ಟ್ ಮುಂತಾದ ಉಪಉತ್ಪನ್ನಗಳ ಲಾಭದಲ್ಲಿ ರೈತರಿಗೆ ಪಾಲು ನೀಡಬೇಕು. ತೂಕದ ಪಾರದರ್ಶಕತೆ: ಕಾರ್ಖಾನೆ ಮುಖ್ಯ ಗೇಟ್ ಬಳಿ ವೇ ಬ್ರಿಜ್ ಹಾಕಿ ರೈತರ ಸಮ್ಮುಖದಲ್ಲೇ ತೂಕ ಮಾಡಬೇಕು.

ಅಳತೆ ಮತ್ತು ತೂಕ ಮಾಪನ ಇಲಾಖೆ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು. ತಜ್ಞರ ಸಮಿತಿ: ಕೃಷಿ ವಿವಿ ಹಾಗೂ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯ ತಜ್ಞರ ಸಮಿತಿ ರಚಿಸಿ ನೈಜ ಸಕ್ಕರೆ ಇಳುವರಿಯನ್ನು ಘೋಷಿಸಬೇಕು. ಕಟಾವು ಮತ್ತು ಸಾಗಣೆ: 12 ತಿಂಗಳ ಒಳಗೆ ಕಟಾವು ಮಾಡಬೇಕು, ದುಬಾರಿ ಕಟಾವು-ಸಾಗಾಣಿಕೆ ವೆಚ್ಚಕ್ಕೆ ಕಡಿವಾಣ ಹಾಕಬೇಕು ಹಾಗೂ ಎಥ-'ನಾಲ್ ಪ್ರಮಾಣವನ್ನು ಶೇ. 25ಕ್ಕೆ ಹೆಚ್ಚಿಸಬೇಕು. ರೈತರಿಗೆ ಉಚಿತ ಸೌಲಭ್ಯ: ರೈತರಿಗೆ ಮಡ್ಡಿ ಹಾಗೂ ಬೂದಿಯನ್ನು ಉಚಿತವಾಗಿ ನೀಡಬೇಕು ಮತ್ತು ತಳಿ ಆಯ್ಕೆಯ ಮುಕ್ತ ಅವಕಾಶವಿರಬೇಕು. ಈ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮುಖಂಡರಾದ ಅಲ್ತಾಫ್ ಇನಾಮಂದಾರ್, ಸಿದ್ದಪ್ಪಾ ಕಲಸೆ, ದೇವು ಬಿರಾದಾರ್ ಹಾಗೂ ಕರೆಪ್ಪಾ ಕರಗೊಂಡ ಉಪಸ್ಥಿತರಿದ್ದರು.

## ಬೀದರ್ ದಕ್ಷಿಣ, ಚಿಟಗುಪ್ಪ ಬರಪೀಡಿತ ಘೋಷಣೆಗೆ ಒತ್ತಾಯ: ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಚೇತನ್ ಸೊರಳ್ಳಿ ಅಭಿನಂದನೆ

ವಿಜಯ ದುಂಬಿ ಸುದ್ದಿ....

**ಬೀದರ್: ಬೀದರ್ ದಕ್ಷಿಣ ಹಾಗೂ ಚಿಟಗುಪ್ಪ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವಂತೆ ಸರ್ಕಾರವನ್ನು ಒತ್ತಾಯಿಸಿ, ರೈತರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸಿದ ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರಿಗೆ ಸಮಸ್ತ ಜನತೆಯ ಹಾಗೂ ರೈತರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುವುದಾಗಿ ಸ್ವಾಮಿ ವಿವೇಕಾನಂದ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಹಾಗೂ ಯುವ ನಾಯಕ ಚೇತನ್ ಸೊರಳ್ಳಿ ತಿಳಿಸಿದ್ದಾರೆ.**



ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ಕ್ಷೇತ್ರದಲ್ಲಿ ತಲೆದೂರಿರುವ ತೀವ್ರ ಅಭಾವ ಹಾಗೂ ಬರಗಾಲದ ಪರಿಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತಂದು, ಅದನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿಸಲು ಶಾಸಕ ಬೆಲ್ದಾಳೆ ಅವರು ಶ್ರಮಿಸುತ್ತಿರುವುದು ಶ್ಲಾಘನೀಯ ಎಂದಿದ್ದಾರೆ. "ರೈತರ ಹಿತರಕ್ಷಣೆಗೆ ನಿರಂತರವಾಗಿ ಶ್ರಮಿಸುತ್ತಿರುವ ಶಾಸಕರು, ತಾಲ್ಲೂಕಿನ ಪ್ರಸ್ತುತ ಕಷ್ಟದ ಪರಿಸ್ಥಿತಿಯಲ್ಲಿ ಕೃಷಿಕರ ಧ್ವನಿಯಾಗಿ ನಿಂತಿದ್ದಾರೆ.

ಕ್ಷೇತ್ರವನ್ನು ಬರಪೀಡಿತ ಎಂದು ಘೋಷಿಸಿ ಸರ್ಕಾರದಿಂದ ಸಿಗಬೇಕಾದ ಸೂಕ್ತ ಪರಿಹಾರ ಹಾಗೂ ಸೌಲಭ್ಯಗಳನ್ನು ತಲುಪಿಸಲು ಶಾಸಕರು ನಡೆಸುತ್ತಿರುವ ಪ್ರಯತ್ನಕ್ಕೆ ಎರಡು ತಾಲ್ಲೂಕಿನ ರೈತ ಬಾಂಧವರ ಪರವಾಗಿ ಅನಂತ ಧನ್ಯವಾದಗಳು," ಎಂದು ಚೇತನ್ ಸೊರಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾ.ಪಂ. ಮೀಸಲಾತಿ ವಿವಾದ: ರೇವಣ್ಣ ವರ್ತನೆಗೆ ಹಾಸನ ಡಿಸಿ ತಿರುಗೇಟು

## ಡಿಸಿ ಸ್ಥಾನದಲ್ಲಿದ್ದರೂ ಗೌರವ ಇಲ್ಲ ಎಂದರೆ ನಾವಿನ್ನು ಯಾವ ಹಂತಕ್ಕೆ ಬರಬೇಕು" ಜಿಲ್ಲಾಧಿಕಾರಿ ಲತಾಕುಮಾರಿ ಆಕ್ರೋಶ

ವಿಜಯ ದುಂಬಿ ಸುದ್ದಿ....

**ಹಾಸನ: ಗ್ರಾಮ ಪಂಚಾಯಿತಿ ಚುನಾವಣೆಗೆ ಅವೈಜ್ಞಾನಿಕವಾಗಿ ಮೀಸಲಾತಿ ನಿಗದಿ ಮಾಡಲಾಗಿದೆ ಎಂದು ಆರೋಪಿಸಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರ ವಿರುದ್ಧ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ಮಾಡಿದ್ದ ವಾಗ್ದಾಳಿ ಇದೀಗ ಜಿಲ್ಲೆಯ ರಾಜಕೀಯ ಹಾಗೂ ಆಡಳಿತ ರಂಗದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ರೇವಣ್ಣ ಅವರ ಸಾರ್ವಜನಿಕ ಹೇಳಿಕೆಗೆ ಜಿಲ್ಲಾಧಿಕಾರಿ ಲತಾಕುಮಾರಿ ಅವರು ಅತ್ಯಂತ ಭಾವುಕರಾಗಿ ಹಾಗೂ ತೀವ್ರ ಆಕ್ರೋಶದಿಂದ ತಿರುಗೇಟು ನೀಡಿದ್ದಾರೆ.**

ಹಾಸನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು, ತಮ್ಮ ಮನಸ್ಸಿನ ತೀವ್ರ ಅಸಮಾಧಾನ ಹಾಗೂ ನೋವನ್ನು ಬಹಿರಂಗವಾಗಿ ಹೊರಹಾಕಿದರು. ತುಚ್ಛವಾಗಿ ಮಾತನಾಡುವುದು ಸರಿಯಲ್ಲ: ಇದು ಮೊದಲ ಬಾರಿಯಲ್ಲ. ಕಳೆದ ಮೂರ್ನಾಲ್ಕು ತಿಂಗಳಿಗೊಮ್ಮೆ ಪ್ರೆಸ್‌ಮೀಟ್ ಮಾಡಿ ಹೀಗೆ ಮಾತನಾಡುತ್ತಿದ್ದಾರೆ. ವೈಯಕ್ತಿಕವಾಗಿ, ಅಗೌರವದಿಂದ, ತುಂಬಾ ತುಚ್ಛವಾಗಿ ಹಾಗೂ ಹಗುರವಾಗಿ ಮಾತನಾಡುವುದನ್ನು ನಾನು ನೋಡಿದ್ದೇನೆ. ಇದರಿಂದ ಸಮಾಜಕ್ಕೆ ಅತ್ಯಂತ ಕೆಟ್ಟ ಸಂದೇಶ ರವಾನೆಯಾಗುತ್ತದೆ.

ತಪ್ಪು ಮಾಡಿದರೆ, ಕಾನೂನು ಚೌಕಟ್ಟು ಮೀರಿ ಕೆಲಸ ಮಾಡಿದರೆ ಅದನ್ನು ಹೇಳುವದೇ ಆದ ಹಂತ ಮತ್ತು ರೀತಿ ಇದೆ. ಆದರೆ ವೈಯಕ್ತಿಕವಾಗಿ, ಮಾನಸಿಕವಾಗಿ ಹಗುರವಾಗಿ ಮಾತನಾಡುವುದು ಅವರ



ಘನತೆಗೆ ತಕ್ಕದ್ದಲ್ಲ. ಅವರು ಬಳಸಿರುವ ಪದಗಳು ನನಗೆ ತೀವ್ರ ನೋವನ್ನು ಉಂಟುಮಾಡಿವೆ" ಎಂದರು. ಶ್ರಮಪಟ್ಟು ಬಂದ ಅಧಿಕಾರಿಗಳಿಗೆ ಗೌರವವಿಲ್ಲವೇ?: ಜಿಲ್ಲಾಧಿಕಾರಿಯಂತಹ ಉನ್ನತ ಮತ್ತು ಜವಾಬ್ದಾರಿಯುತ ಸ್ಥಾನದಲ್ಲಿರುವವರಿಗೇ ಈ ರೀತಿ ಮಾತನಾಡಿದರೆ, ಇನ್ನುಳಿದ ಕೆಳಹಂತದ ಅಧಿಕಾರಿಗಳ ಬಗ್ಗೆ ಹೇಗೆ ಮಾತನಾಡಬಹುದು? ಬಹಿರಂಗ ಸಭೆಯಲ್ಲಿ ಅಧಿಕಾರಿಯೊಬ್ಬರಿಗೆ ಕೀಳಾಗಿ ಮಾತನಾಡುವುದು ತಪ್ಪು. 'ಎಲ್ಲಿಂದ ಈ ಡಿಸಿ ಹಿಡಿದುಕೊಂಡು ಬಂದ್ರು' ಎಂದು ಅತ್ಯಂತ ಕೀಳುಮಟ್ಟದ ಭಾಷೆ ಬಳಸಿದ್ದಾರೆ.

ಈ ಸ್ಥಾನಕ್ಕೆ ಬರಲು ಪ್ರತಿಯೊಬ್ಬ ಅಧಿಕಾರಿಗೂ ತನ್ನದೇ ಆದ ಸುದೀರ್ಘ ಹೋರಾಟ ಮತ್ತು ಶ್ರಮವಿರುತ್ತದೆ. ಎಷ್ಟೋ ಅಧಿಕಾರಿಗಳು ಅವರ ವಿರುದ್ಧ ಮಾತನಾಡಲು ಭಯಪಡುತ್ತಾರೆ." "ಶಿಕ್ಷಣ ಪಡೆದರೆ ಗೌರವ ಸಿಗುತ್ತೆ ಅಂದರು, ಶಿಕ್ಷಣ ಪಡೆದೆವು. ಉತ್ತಮ ಅಧಿಕಾರದ ಸ್ಥಾನಕ್ಕೆ ಬಂದರೆ ಗೌರವ ಸಿಗುತ್ತೆ ಅಂದರು, ಅಧಿಕಾರ ಪಡೆದೆವು. ಆದರೂ ಡಿಸಿ ಸ್ಥಾನಕ್ಕೆ ಬಂದರೂ ಗೌರವ ಇಲ್ಲ ಎಂದರೆ, ಇನ್ನು ಯಾವ ಹಂತಕ್ಕೆ ಬರಬೇಕು?" ಎಂದು ಭಾವುಕರಾಗಿ ಪ್ರಶ್ನಿಸಿದರು.

ವಿವಾದದ ಹಿನ್ನೆಲೆ: ಗ್ರಾಮ ಪಂಚಾಯಿತಿ ಚುನಾವಣೆಗೆ ನಿಗದಿ ಮಾಡಿರುವ ಮೀಸಲಾತಿ ಅವೈಜ್ಞಾನಿಕವಾಗಿದೆ ಎಂದು ಆರೋಪಿಸಿ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರು ಜಿಲ್ಲಾಧಿಕಾರಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು. ಸಾರ್ವಜನಿಕರ ಆರೋಪ ತನಗೆ ಗೊತ್ತಿಲ್ಲ ಎಂದೂ ಡಿಸಿ ಸ್ಪಷ್ಟಪಡಿಸಿದ್ದಾರೆ. ತಪ್ಪಾಗಿದ್ದರೆ ಕಾನೂನಿನಲ್ಲಿ ತಿದ್ದುಪಡಿಗೆ ಅವಕಾಶ ಇರುತ್ತದೆ, ಆದರೆ ವೈಯಕ್ತಿಕ ದಾಳಿ ಸರಿಯಲ್ಲ ಎಂಬುದು ಜಿಲ್ಲಾಧಿಕಾರಿಗಳ ಸ್ಪಷ್ಟ ವಾದವಾಗಿದೆ.

# ಮೇಕೆದಾಟು ಶಂಕುಸ್ಥಾಪನೆಗೆ 6-8 ತಿಂಗಳ ಗಡುವು ತಮಿಳುನಾಡು ಬೆಂಬಲದೊಂದಿಗೆ ಯೋಜನೆಗೆ ನಿರ್ಧಾರ

**ವಿಜಯ ದುಂಬಿ ಸುದ್ದಿ....**

**ಬೆಂಗಳೂರು: ಮುಂದಿನ 6 ರಿಂದ 8 ತಿಂಗಳೊಳಗೆ ಮೇಕೆದಾಟು ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಜಲಸಂಪನ್ಮೂಲ ಸಚಿವ ಓ. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಖಾಸಗಿ ವಾಹಿನಿಯೊಂದರ ಜೊತೆ ಮಾತನಾಡಿದ ಅವರು ಕಾವೇರಿ ಬಿಕ್ಕಟ್ಟು, ಅರಣ್ಯ ಇಲಾಖೆ ಅನುಮತಿ ಹಾಗೂ ರಾಜ್ಯದ ನೀರಾವರಿ ಯೋಜನೆಗಳ ಕುರಿತು ಪ್ರಮುಖ ವಿಷಯಗಳನ್ನು ಹಂಚಿಕೊಂಡಿದ್ದಾರೆ.**




ಸುದ್ದಿಯ ಪ್ರಮುಖ ಅಂಶಗಳು: ಮೇಕೆದಾಟು ಯೋಜನೆ ಪ್ರಗತಿ: ಮೇಕೆದಾಟು ಯೋಜನೆಯು ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಕನಸಿನ ಯೋಜನೆಯಾಗಿದೆ. ಯೋಜನೆಗಾಗಿ 12,500 ಎಕರೆ ಅರಣ್ಯ ಭೂಮಿಗೆ ಪರ್ಯಾಯವಾಗಿ 13 ಜಿಲ್ಲೆಗಳಲ್ಲಿ 20,000 ಎಕರೆ ಜಮೀನು ಗುರುತಿಸಲಾಗಿದೆ. ಅರಣ್ಯ ಇಲಾಖೆಯಿಂದ ಶೀಘ್ರ ಅನುಮತಿ ಪಡೆಯಲು ಜಿಲ್ಲಾಧಿಕಾರಿಗಳು ಮತ್ತು ಡಿಎಫ್ ಓ ಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಸಭೆ ನಡೆಸಲಾಗುವುದು.

ತಮಿಳುನಾಡು ಸಿಎಂ ಭೇಟಿಗೆ ಸಿದ್ಧ: ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರು ಮೇಕೆದಾಟು ವಿಷಯದಲ್ಲಿ ಮೃದು ಧೋರಣೆ ತಳೆದಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಪಿನಂತೆ ಕುಡಿಯುವ ನೀರಿಗೆ ಯಾರೂ ಅಡ್ಡಿಪಡಿಸುವಂತಿಲ್ಲ. ಅಗತ್ಯಬಿದ್ದಲ್ಲಿ ನಾನೇ ಚೆನ್ನೈಗೆ ತೆರಳಿ ತಮಿಳುನಾಡು ಸರ್ಕಾರವನ್ನು ಒಪ್ಪಿಸಿ, ಅವರ ಬೆಂಬಲದೊಂದಿಗೆ ಯೋಜನೆ ಕೈಗೆತ್ತಿಕೊಳ್ಳಲು ಸಿದ್ಧ ಎಂದು ಸಚಿವರು ಸ್ಪಷ್ಟಪಡಿಸಿದರು.

ನೀರಿನ ಸದ್ಬಳಕೆ: ಟ್ರಿಬ್ಯುನಲ್ ಆದೇಶದಂತೆ ಪ್ರತಿವರ್ಷ 177.25 ಟಿಎಂಎಸ್ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿದೆ.

ಆದರೆ ಮಳೆಗಾಲದಲ್ಲಿ ಸುಮಾರು 300 ಟಿಎಂಎಸ್ ನೀರು ಸಮುದ್ರಕ್ಕೆ ಹರಿದು ಪೋಲಾಗುತ್ತಿದ್ದು, ಇದನ್ನು ತಡೆದು 66 ಟಿಎಂಎಸ್ ನೀರು ಸಂಗ್ರಹಿಸಲು ಮೇಕೆದಾಟು ಅಗತ್ಯ. ಇದರಲ್ಲಿ ಕರ್ನಾಟಕ ಬಳಸಿಕೊಳ್ಳುವುದು 10-20 ಟಿಎಂಎಸ್ ಕುಡಿಯುವ ನೀರು ಮಾತ್ರ, ಬಾಕಿ ನೀರು ತಮಿಳುನಾಡಿಗೆ ಅನುಕೂಲವಾಗಲಿದೆ.

ಕೆಆರ್‌ಎಸ್ ಮತ್ತು ತುಂಗಭದ್ರಾ ಹೂಳು ತೆರವು: ಸ್ವಾತಂತ್ರ್ಯದ ನಂತರ ಏಖಖ ಮತ್ತು ತುಂಗಭದ್ರಾ ಜಲಾಶಯಗಳಲ್ಲಿ ಹೂಳು ತೆಗೆದಿಲ್ಲ.

ಈಗ ಖಾಸಗಿ ಏಜೆನ್ಸಿಗಳ ಮೂಲಕ ಹೂಳು ತೆಗೆದು, ಅದರಿಂದ ಬರುವ ಮರಳು ಮತ್ತು ಇಟ್ಟಿಗೆಗಳಂತಹ ಬೈ-ಪ್ರಾಡಕ್ಟ್‌ಗಳ ಮೇಲೆ ಸರ್ಕಾರಕ್ಕೆ ರಾಯಲ್ಟಿ ಪಡೆಯುವ ಯೋಜನೆಯಿದೆ. ಈ ಬಗ್ಗೆ ಪರಿಶೀಲಿಸಲು ಎಸಿಎಸ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಕಳಸಾ-ಬಂಡೂರಿ ಮತ್ತು ಕೇಂದ್ರದ ಬಾಕಿ ಅನುದಾನ: ಕಳಸಾ-ಬಂಡೂರಿ ಯೋಜನೆಯು ಕೇವಲ 3.2 ಟಿಎಂಸಿ ಕುಡಿಯುವ ನೀರಿನ ಯೋಜನೆಯಾಗಿದ್ದು, ಅರಣ್ಯ ಅನುಮತಿ ಒಂದೇ ಬಾಕಿ ಇದೆ. ಈ ಬಗ್ಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರೊಂದಿಗೆ ಚರ್ಚಿಸಿ ಬಗೆಹರಿಸಲಾಗುವುದು. ಜೊತೆಗೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ 15,000 ಕೋಟಿ ರೂ. (ಅಪ್ಪರ್ ಭದ್ರಾ 5,000 ಕೋಟಿ, ಬೆಂಗಳೂರು 5,000 ಕೋಟಿ, ಮಹದಾಯಿ 5,000 ಕೋಟಿ) ಅನುದಾನವನ್ನು ತರಲು ಕೇಂದ್ರದ ನಾಲ್ವರು ಸಚಿವರು ಪ್ರಧಾನಿ ಬಳಿ ನಿಯೋಗ ಒಯ್ಯಬೇಕಿದೆ ಎಂದರು.

## ರಾಯಚೂರು ಜಿಲ್ಲೆಯ ಅಭಿವೃದ್ಧಿಗೆ ಸಚಿವ ಸತೀಶ್ ಜಾರಕಿಹೊಳಿ ಅವರೊಂದಿಗೆ ಮಹತ್ವದ ಮಾತುಕತೆ

**ವಿಜಯ ದುಂಬಿ ಸುದ್ದಿ....**

**ಮಾಜಿ ಸಚಿವರಾದ ಶ್ರೀ ಎನ್. ಎಸ್. ಬೋಸರಾಜ್ ಅವರು ಮಾನ್ವಿ ಶಾಸಕರಾದ ಶ್ರೀ ಹಂಪಯ್ಯ ನಾಯಕ ಹಾಗೂ ಮಸ್ಕಿ ಶಾಸಕರಾದ ಶ್ರೀ ಬಸನಗೌಡ ತುರ್ವಿಹಾಳ ಅವರೊಂದಿಗೆ ಇಂದು ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿ ಅವರನ್ನು ಭೇಟಿ ಮಾಡಿ, ರಾಯಚೂರು ಜಿಲ್ಲೆಯ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಲವು ಮಹತ್ವದ ವಿಷಯಗಳ ಕುರಿತು ಸುದೀರ್ಘವಾಗಿ ಚರ್ಚಿಸಿದರು.**



ಈ ಸಂದರ್ಭದಲ್ಲಿ ಮಾನ್ವಿ ಹಾಗೂ ಮಸ್ಕಿ ಕ್ಷೇತ್ರಗಳ ರಸ್ತೆ ಸಂಪರ್ಕ, ಪ್ರಮುಖ ರಸ್ತೆಗಳ ಅಭಿವೃದ್ಧಿ, ಸೇತುವೆಗಳ ನಿರ್ಮಾಣ, ಗ್ರಾಮೀಣ ಸಂಪರ್ಕ ರಸ್ತೆಗಳ ಸುಧಾರಣೆ, ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ ವಿವಿಧ ಲೋಕೋಪಯೋಗಿ ಕಾಮಗಾರಿಗಳಿಗೆ ಅಗತ್ಯವಿರುವ ಅನುದಾನ ಕುರಿತು ಸಚಿವರೊಂದಿಗೆ ಚರ್ಚಿಸಿ, ಶೀಘ್ರವಾಗಿ ಅನುದಾನ ಬಿಡುಗಡೆ ಮಾಡುವಂತೆ ಮನವಿ ಸಲ್ಲಿಸಲಾಯಿತು. ಕ್ಷೇತ್ರಗಳಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ರಸ್ತೆ ಹಾಗೂ ಮೂಲಸೌಕರ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದು, ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅಗತ್ಯ ಕಾಮಗಾರಿಗಳಿಗೆ ಆದ್ಯತೆ ನೀಡುವಂತೆ ಮನವಿ ಮಾಡಲಾಯಿತು. ಈಗಾಗಲೇ ಪ್ರಸ್ತಾವನೆಯಲ್ಲಿರುವ ಕಾಮಗಾರಿಗಳಿಗೆ ತ್ವರಿತವಾಗಿ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ದೊರೆಯುವಂತೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು. ಉತ್ತಮ ರಸ್ತೆ ಸಂಪರ್ಕವೇ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯ ಪ್ರಮುಖ ಆಧಾರವಾಗಿದ್ದು, ರೈತರು, ವಿದ್ಯಾರ್ಥಿಗಳು, ವ್ಯಾಪಾರಸ್ಥರು ಹಾಗೂ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅಗತ್ಯವಾದ ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಅಗತ್ಯದ ಕುರಿತು ಚರ್ಚಿಸಲಾಯಿತು. ರಾಯಚೂರು ಜಿಲ್ಲೆಯ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವಂತೆ ಸಚಿವರಲ್ಲಿ ಮನವಿ ಮಾಡಲಾಗಿದ್ದು, ಜನರ ಮೂಲಭೂತ ಅಗತ್ಯಗಳಿಗೆ ಸ್ಪಂದಿಸುವ ಹಾಗೂ ಕ್ಷೇತ್ರಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸುವ ವಿಶ್ವಾಸ ವ್ಯಕ್ತಪಡಿಸಲಾಯಿತು. ಜನರ ಆಶಯಗಳು ಮತ್ತು ಕ್ಷೇತ್ರದ ಅಗತ್ಯತೆಗಳನ್ನು ಸರ್ಕಾರದ ಗಮನಕ್ಕೆ ತಂದು, ಅಭಿವೃದ್ಧಿ ಕಾಮಗಾರಿಗಳಿಗೆ ಅಗತ್ಯ ಅನುದಾನ ಹಾಗೂ ಅನುಮೋದನೆ ಪಡೆಯಲು ನಿರಂತರವಾಗಿ ಪ್ರಯತ್ನಿಸಲಾಗುವುದು. ಅಭಿವೃದ್ಧಿಯ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ಜನರ ನಿರೀಕ್ಷೆಗಳಿಗೆ ತಕ್ಕಂತೆ ಕ್ಷೇತ್ರಗಳ ಅಭಿವೃದ್ಧಿಗೆ ವೇಗ ನೀಡಲಾಗುವುದು.

ವಿಜಯ ದುಂಬಿ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ



**ವಿಜಯ ದುಂಬಿ ಸುದ್ದಿ....**

**ನೆಲಮಂಗಲ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನೆಲಮಂಗಲ ತಾಲೂಕು ಇದರ ವತಿಯಿಂದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನೆಲಮಂಗಲದ ಪವಾಡ ಶ್ರೀ ಬಸವಣ್ಣ ದೇವರ ಮಠದ ಪರಮ ಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು.**

ಪ್ರಾದೇಶಿಕ ನಿರ್ದೇಶಕರಾದ ಶೀನಪ್ಪ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಿದರು. ಬೆಂಗಳೂರು ಜಿಲ್ಲಾ ಜನ ಜಾಗೃತಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷರಾದ ವೀಣಾ ರಮೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ನಿಕಟಪೂರ್ವ ರಾಜ್ಯಾಧ್ಯಕ್ಷರು ಹಾಗೂ ಟ್ರಸ್ಟಿಗಳಾದ ರಾಮಸ್ವಾಮಿ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕರಾದ ಉಮರಬ್ಬ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸೋಲದೇವನಹಳ್ಳಿಯ ವೈದ್ಯರತ್ನ ಲಕ್ಷ್ಮಮ್ಮ ಗಂಗಣ್ಣ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ಹೇಮಾವತಿ ಎಚ್. ಅವರು "ಸಂಸ್ಕೃತಿ ಮತ್ತು ಸಂಸ್ಕಾರದಲ್ಲಿ ತಾಯಂದಿರ ಪಾತ್ರ" ಎಂಬ ವಿಷಯದ ಕುರಿತು ವಿಶೇಷ ಮಾಹಿತಿ ನೀಡಿ, ಸಮಾಜ ಕಟ್ಟುವಲ್ಲಿ ಹಾಗೂ ಕುಟುಂಬದಲ್ಲಿ ಸಂಸ್ಕಾರ ಬೆಳೆಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನೆಲಮಂಗಲ ತಾಲೂಕಿನ ಯೋಜನಾಧಿಕಾರಿ ಶ್ರೀಮತಿ ಸುಜಾತ ಶೆಟ್ಟಿ, ಯಶವಂತಪುರ ತಾಲೂಕಿನ ಯೋಜನಾಧಿಕಾರಿ ಸುಕೇಶ್ ಹಾಗೂ ಪ್ರಾದೇಶಿಕ ಕಚೇರಿಯ ಜ್ಞಾನವಿಕಾಸ ಯೋಜನಾಧಿಕಾರಿ ಶ್ರೀಮತಿ ಸಂಗೀತ ಉಪಸ್ಥಿತರಿದ್ದರು. ಇದರೊಂದಿಗೆ ಜ್ಞಾನವಿಕಾಸ ಸಮನ್ವಯ ಅಧಿಕಾರಿಗಳು, ಮೇಲ್ವಿಚಾರಕರು, ಸಿಬ್ಬಂದಿವರ್ಗ, ಸೇವಾ ಪ್ರತಿನಿಧಿಗಳು ಹಾಗೂ ಜ್ಞಾನವಿಕಾಸ ಕೇಂದ್ರದ ನೂರಾರು ಸದಸ್ಯರು ಭಾಗವಹಿಸಿದ್ದರು. ಕಾರ್ಯಕ್ರಮದ ಭಾಗವಾಗಿ ಸದಸ್ಯರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ವಿವಿಧ ಬಗೆಯ ಪ್ರದರ್ಶನ ಸ್ಟಾಲ್‌ಗಳು ಸಾರ್ವಜನಿಕರ ಗಮನ ಸೆಳೆದವು.

# ಸರ್ಕಾರಿ ಶಾಲಾ ಮಕ್ಕಳಿಗೆ ವ್ಯಾಸಂಗದ ಉತ್ಸಾಹಕ್ಕೆ ಬೆಳಕು ಸಹಾಯ: ಶಿವಣ್ಣ ಗೌಡ

## ಸರ್ಕಾರಿ ಶಾಲೆಯ ಬೆಳವಣಿಗೆ ಸರ್ಕಾರಿ ಶಾಲೆಗೆ ಕಡ್ಡಾಯ ಮಕ್ಕಳ ಸೇರ್ಪಡೆಗೆ ಉತ್ಸಾಹಕ್ಕೆ ಸೇವೆ

**ವಿಜಯ ದುಂಬಿ ಸುದ್ದಿ....**

**ನಾಗಮಂಗಲ: ಸರ್ಕಾರಿ ಶಾಲೆಯ ಉತ್ತೇಜಿಸುವ ಸಲುವಾಗಿ ಗ್ರಾಮೀಣ ಮಕ್ಕಳ ವ್ಯಾಸಂಗದ ಉತ್ಸಾಹಕ್ಕೆ ನಾಗಮಂಗಲದ ಬೆಳಕು ಮೊಬೈಲ್ ತಂಡ ಸಹಾಯ ಮಾಡುತ್ತಿರುವುದು ಸಾರ್ಥಕ ಎಂದು ನಿವೃತ್ತ ದೈಹಿಕ ಪರಿವೀಕ್ಷಕರಾದ ಶಿವಣ್ಣ ಗೌಡ ಅಭಿಪ್ರಾಯ ಪಟ್ಟರು. ಅವರು ನಾಗಮಂಗಲ ತಾಲೂಕು ಚಿನ್ಯ ಗ್ರಾಮದ ಸರ್ಕಾರಿ ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಪಾಠಶಾಲೆಯ ಮಕ್ಕಳಿಗೆ ಶಾಲಾ ಬ್ಯಾಗ್ ನೀಡುವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.**




ಸಮಾಜ ಸೇವೆಯಲ್ಲಿ ಸಂಪಾದನೆಗೆ ಪ್ರಾಮುಖ್ಯತೆ ನೀಡದೆ ಗ್ರಾಮೀಣ ಮಕ್ಕಳ ಸರ್ಕಾರಿ ಶಾಲೆಗಳ ಬೆಳವಣಿಗೆ ಮಕ್ಕಳ ಶಿಕ್ಷಣದ ಕಲಿಕೆಯ ಪೈಪೋಟಿಯ ಯುಗದಲ್ಲಿ ಸರ್ಕಾರಿ ಶಾಲಾ ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣದೊಂದಿಗೆ ಶಿಕ್ಷಣದಲ್ಲಿ ಪೈಪೋಟಿಗೆ ಸಮಾನಂತರವಾಗಿ ಬೆಳೆಯಲು ನಾಗಮಂಗಲದ ಬೆಳಕು ಮೊಬೈಲ್ ತಂಡ ವ್ಯವಹಾರ ಹೆಚ್ಚಿಸುವ ದೃಷ್ಟಿಯ ನಿಟ್ಟಿನಲ್ಲಿ ಹೊರತುಪಡಿಸಿ ಸೇವಾ ಮನೋಭಾವನೆಯಲ್ಲಿ ಈ ಕೆಲಸ ಸಾರ್ಥಕವೆಂದು ತಿಳಿಸಿದರು.

ಆಧುನಿಕ ತಂತ್ರಜ್ಞಾನ ಯುಗದಲ್ಲಿ ಗ್ರಾಮೀಣ ಮಕ್ಕಳ ಕಲಿಕೆಯು ಶಿಕ್ಷಣದಲ್ಲೂ ಪೈಪೋಟಿಯತ್ತ ಬೆಳೆಯಲು ಸಹಕಾರಿಯಾಗುವ ದೃಷ್ಟಿಯಿಂದ ಕ್ಲಬ್ ಸಹಾಯ ನೀಡುತ್ತಾ ಬಂದಿದೆ ಎಂದು ಶ್ರೀಕಾಂತ್ ಕಣ್ವಪಿ ರವರು ತಿಳಿಸಿದರು. ಇದೇ ಸಂದರ್ಭದಲ್ಲಿ ರೋಟರಿ ಕ್ಲಬ್ ಆಫ್ ಮೈಸೂರ್ ಇವರಿಂದ ಶಾಲಾ ಮಕ್ಕಳಿಗೆ ಎಲ್ ಇ ಡಿ ಟಿವಿ ವಿತರಣೆ ಮಾಡಲಾಯಿತು. ಸಮಾರಂಭದಲ್ಲಿ ಕ್ಲಬ್ ಪದಾಧಿಕಾರಿಗಳಾದ ಎ.ಜೆ ಕೃಷ್ಣಮೂರ್ತಿ ಡಾ. ರಾಘವೇಂದ್ರ ರವಿಕಿರಣ್ ಚಂದ್ರು ರವರುಗಳು ಉಪಸಿ ತಿರಿದ್ದರು.

ಸಮಾರಂಭದಲ್ಲಿ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಕುಮಾರ್ ಆಚಾರ್ ಉಪಾಧ್ಯಕ್ಷರಾದ ರಮೇಶ್ ಹಾಗೂ ಬೆಳಕು ಮೊಬೈಲ್ ಸಂಸ್ಥಾಪಕರಾದ ಕಾರ್ತಿಕ್ ರವರು ಹಾಗೂ ಸಿಆರ್‌ಪಿ ಪಾಂಡುರಂಗ ವಿಠಲ ಶಾಲಾ ಆಡಳಿತ ಮಂಡಳಿಯ ನಿರ್ದೇಶಕರು ಸದಸ್ಯರು ಹಾಗೂ ಶಿಕ್ಷಕ ವರ್ಗ ಹಾಜರಿದ್ದು ಮುಖ್ಯ ಶಿಕ್ಷಕರಾದಜವರಯ್ಯನವರು ಸ್ವಾಗತಿಸಿದರು.

# ಶ್ರದ್ಧಾಭಕ್ತಿಯಿಂದ ಶ್ರೀ ಮಾರಮ್ಮ ದೇವಿಯ 48ನೇ ದಿನದ ಪೂಜೆ



**ವಿಜಯ ದುಂಬಿ ಸುದ್ದಿ....**

**ನೆಲಮಂಗಲ: ತಾಲೂಕಿನ ಸೋಲೂರು ಹೋಬಳಿಯ ಮೋಟಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಕನಪಾಳ್ಯ ಗ್ರಾಮದಲ್ಲಿ ಗ್ರಾಮದೇವತೆ ಶ್ರೀ ಮಾರಮ್ಮ ದೇವಿಯ 48ನೇ ದಿನದ ಪೂಜಾ ಕಾರ್ಯಕ್ರಮವು ಶ್ರದ್ಧಾಭಕ್ತಿ ಹಾಗೂ ಸಂಭ್ರಮ ಸಡಗರದಿಂದ ನೆರವೇರಿತು.**

ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯ ಮುಖಂಡರು, ಶಿಕ್ಷಣ ತಜ್ಞರು, ರೈತರು ಹಾಗೂ ಮಹಿಳೆಯರು ಸೇರಿದಂತೆ ನೂರಾರು ಭಕ್ತಾದಿಗಳು ಪಾಲ್ಗೊಂಡು ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಗ್ರಾಮದ ಮುಖಂಡ ಹಾಗೂ ಸಾವಯವ ಕೃಷಿಕ ಎನ್. ಕೇಶವಮೂರ್ತಿ ಅವರು, "ಗ್ರಾಮದಲ್ಲಿ ಶಾಂತಿ, ಸೌಹಾರ್ದತೆ ಮತ್ತು ನೆಮ್ಮದಿ ನೆಲೆಸಲು ಇಂತಹ ದೇವತಾ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುವುದು ಅಗತ್ಯ. ಗ್ರಾಮಸ್ಥರೆಲ್ಲರೂ ಒಗ್ಗಟ್ಟಿನಿಂದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಿಂತನೆಗಳಲ್ಲಿ ಭಾಗಿಗಳಾಗುವ ಮೂಲಕ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಕೈಜೋಡಿಸಬೇಕು," ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಮುಖಂಡರು ಹಾಗೂ ನಿವೃತ್ತ ಶಿಕ್ಷಕರಾದ ಪಿಚನ್ನೇಗೌಡ, ಎನ್. ನಂಜುಂಡಯ್ಯ, ಟಿ. ಗಂಗಮರಾಯನವರು, ಶಿಕ್ಷಕರಾದ ಲಕ್ಷ್ಮಣಯ್ಯ, ಮಹದೇವಯ್ಯ, ಗಂಗಾಧರ್, ರೇಣುಕಯ್ಯ, ಎನ್. ಕೇಶವಮೂರ್ತಿ, ಪ್ರಗತಿಪರ ರೈತರಾದ ಶಿವಣ್ಣ, ಎನ್. ನಂಜುಂಡಯ್ಯ, ನಂದೀಶ, ರಮೇಶ್, ಪ್ರದೀಪ್, ಗಿರೀಶ್, ಶಂಕರ, ಕೃಷ್ಣಮೂರ್ತಿ ಹಾಗೂ ರವಿಕುಮಾರ್ (ಆರ್ಮಿ) ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಪೂಜಾ ಮಹೋತ್ಸವದ ಅಂಗವಾಗಿ ಗ್ರಾಮದ ಮಹಿಳೆಯರು ಮತ್ತು ಯುವಕರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು. ಕಾರ್ಯಕ್ರಮದ ಕೊನೆಯಲ್ಲಿ ನೆರೆದಿದ್ದ ಎಲ್ಲಾ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವಿತರಿಸಲಾಯಿತು.

# ಮದಲಕೋಟೆಯಲ್ಲಿ ಪಾರ್ಥೇನಿಯಂ ಕಳೆ ಸಮಗ್ರ ನಿರ್ವಹಣೆ ಜಾಗೃತಿ ಹಾಗೂ ಕಾಂಪೋಸ್ಟ್ ತಯಾರಿಕೆ ಪ್ರಾತ್ಯಕ್ಷಿಕೆ

**ವಿಜಯ ದುಂಬಿ ಸುದ್ದಿ....**

**ನೆಲಮಂಗಲ: ತಾಲೂಕಿನ ಮದಲಕೋಟೆ ಗ್ರಾಮದಲ್ಲಿ ರಾವೆ ಕಾರ್ಯಕ್ರಮದ ಅಂಗವಾಗಿ ಇತ್ತೀಚೆಗೆ ಆಚರಿಸಲಾದ ಪಾರ್ಥೇನಿಯಂ ಜಾಗೃತಿ ಸಪ್ತಾಹದ ಪ್ರಯುಕ್ತ ಪಾರ್ಥೇನಿಯಂ ಕಳೆಯ ಸಮಗ್ರ ನಿರ್ವಹಣೆ ಹಾಗೂ ಕಾಂಪೋಸ್ಟ್ ತಯಾರಿಕೆ ಕುರಿತು ರೈತರಿಗೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**




ಕೃಷಿ ವಿಶ್ವವಿದ್ಯಾಲಯದ ತಜ್ಞರಾದ ಡಾ. ಮನು ಗಂಗಾಧರಯ್ಯ, ಡಾ. ಆನಂದ್, ಡಾ. ಶ್ರೀಕಾಂತ್ ಹಾಗೂ ಪ್ರಾಧ್ಯಾಪಕ ಡಾ. ಅರವಿಂದ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪಾರ್ಥೇನಿಯಂ ವೈಜ್ಞಾನಿಕ ನಿರ್ವಹಣೆಯ ವಿವಿಧ ಹಂತಗಳ ಕುರಿತು ಮಾಹಿತಿ ನೀಡಿದರು. ವಿವಿಧ ನಿರ್ವಹಣಾ ಕ್ರಮಗಳು: ಸಮಯೋಚಿತ ಕೈಕಳೆ: ಪಾರ್ಥೇನಿಯಂ ಸಣ್ಣದಿದ್ದಾಗ ಹಾಗೂ ಹೂ ಬಿಟ್ಟು ಬೀಜೋತ್ಪಾದನೆ ಮಾಡುವ ಮೊದಲೇ ಕೈಯಿಂದ ಕಳೆ ತೆಗೆಯುವುದು ಹೆಚ್ಚು ಪರಿಣಾಮಕಾರಿ.

ಜೈವಿಕ ನಿಯಂತ್ರಣ: 'ಝೈಗೋಗ್ರಾಮ ಬೈಕಲರೇಟಾ' ಕೀಟಗಳು ಪಾರ್ಥೇನಿಯಂ ಎಲೆಗಳನ್ನು ತಿಂದು ಅದರ ಬೆಳವಣಿಗೆಯನ್ನು ತಡೆಯುತ್ತವೆ. ಈ ಜೈವಿಕ ಕೀಟಗಳನ್ನು ರಕ್ಷಿಸಲು ಅನಗತ್ಯ ರಾಸಾಯನಿಕ ಕೀಟನಾಶಕಗಳ ಬಳಕೆಯನ್ನು ಶಮನಗೊಳಿಸಬೇಕು. ರಾಸಾಯನಿಕ ಬಳಕೆ: ತೀರಾ ಅಗತ್ಯವಿದ್ದಾಗ ಮಾತ್ರ ಅಂತಿಮ ಆಯ್ಕೆಯಾಗಿ ಗ್ಲೈಫೋಸೇಟ್ 41 ಖಐ ರಾಸಾಯನಿಕವನ್ನು ಶಿಫಾರಸು ಮಾಡಿದ ಪ್ರಮಾಣದಲ್ಲಿ ಸರಿಯಾಗಿ ಬಳಸಬೇಕು. ಕಾಂಪೋಸ್ಟ್ ತಯಾರಿಕೆ ಪ್ರಾತ್ಯಕ್ಷಿಕೆ: ಪಾರ್ಥೇನಿಯಂ ಕಳೆಯನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಲು 50 ಕೆ.ಜಿ. ಪಾರ್ಥೇನಿಯಂ ಸಸ್ಯಾವಶೇಷ, ಸಗಣಿ ಸ್ಲರಿ, ಟ್ರೈಕೋಡರ್ಮಾ ಮತ್ತು ಯೂರಿಯಾ ಬಳಸಿ ಕಾಂಪೋಸ್ಟ್ ತಯಾರಿಸುವ ವಿಧಾನವನ್ನು ರೈತರ ಸಮ್ಮುಖದಲ್ಲೇ ಹಂತ ಹಂತವಾಗಿ ಪ್ರದರ್ಶಿಸಲಾಯಿತು.

ಪಾರ್ಥೇನಿಯಂನಿಂದ ಮಾನವನಿಗೆ ಉಂಟಾಗುವ ಚರ್ಮದ ಅಲರ್ಜಿ ಹಾಗೂ ಪರಿಸರದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆಯೂ ಈ ಸಂದರ್ಭದಲ್ಲಿ ಅರಿವು ಮೂಡಿಸಲಾಯಿತು. ಗ್ರಾಮದ ರೈತರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಜ್ಞರಿಂದ ತಮ್ಮ ಸಂಶಯಗಳನ್ನು ನಿವಾರಿಸಿಕೊಂಡರು.

# ಜೇವರ್ಗಿಯಲ್ಲಿ ಬಂಜಾರಾ ಸಮಾಜದ ಬೃಹತ್ ಬೈಠಕ್: ನೂತನ ಪದಾಧಿಕಾರಿಗಳ ಆಯ್ಕೆ

ವಿಜಯ ದುಂಬಿ ಸುದ್ದಿ....

**ಜೇವರ್ಗಿ: ಕಲಬುರಗಿ ಜಿಲ್ಲೆಯ ಜೇವರ್ಗಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲೂಕು ಬಂಜಾರಾ ಸಮಾಜದ ಬೃಹತ್ ಬೈಠಕ್ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಮಾಜದ ಏಳಿಗೆ, ಸಂಘಟನೆ, ಒಗ್ಗಟ್ಟು ಹಾಗೂ ಯುವಕರನ್ನು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸುವ ಉದ್ದೇಶದಿಂದ ಆಯೋಜಿಸಲಾಗಿದ್ದ ಸಭೆಯಲ್ಲಿ ತಾಲೂಕು ಮಟ್ಟದ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.**



ತಾಲೂಕು ಬಂಜಾರಾ ಸಮಾಜದ ಅಧ್ಯಕ್ಷರಾಗಿ ಬಹದ್ದೂರ್ ಎಸ್. ರಾಠೋಡ ಮಂದೇವಾಲ, ಗೌರವ ಅಧ್ಯಕ್ಷರಾಗಿ ತಿಪ್ಪಣ್ಣ ಎಸ್. ರಾಠೋಡ ಜೈನಾಪೂರ, ಕಾರ್ಯಧ್ಯಕ್ಷರಾದ ರಮೇಶ್ ಕೆ ರಾಠೋಡ್ ಪ್ರಧಾನ ಕಾರ್ಯದರ್ಶಿಯಾಗಿ ಲಕ್ಷ್ಮಣ ಎಸ್. ಪವಾರ ಮಾವನೂರ ಹಾಗೂ ಯೂತ್ ತಾಲೂಕು ಅಧ್ಯಕ್ಷರಾಗಿ ಕೃಷ್ಣ ಟಿ. ರಾಠೋಡ ಹರವಾಳ ಅವರನ್ನು ಆಯ್ಕೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ವಿವಿಧ ಹುದ್ದೆಗಳಿಗೆ ಪದಾಧಿಕಾ-ರಿಗಳನ್ನು ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಪ್ರಭು ಬಿ. ಜಾಧವ್ ಜೇವರ್ಗಿ, ಮನ್ನುನಾಯಕ ಜೈನಾಪೂರ, ಗೋಪಾಲ ರಾಠೋಡ ಹರವಾಳ, ಧರ್ಮು ಚೆನ್ನರಾಠೋಡ ಹಾಗೂ ಕಿಶನ ಚವ್ಹಾಣ ಗುಡೂರ ಅವರನ್ನು ಆಯ್ಕೆ ಮಾಡಲಾಯಿತು.

ಕಾನೂನು ಸಲಹೆಗಾರರಾಗಿ ತುಳಜಾರಾಮ ರಾಠೋಡ ಹರವಾಳ, ತಾಲೂಕು ವಕ್ತಾರರಾಗಿ ಮಹಾಂತೇಶ ಪವಾರ ಗುಡೂರ, ಯೂತ್ ಗೌರವ ಅಧ್ಯಕ್ಷರಾಗಿ ಸುರೇಶ್ ರಾಠೋಡ ಮಂದೇವಾಲ, ಸಂಘಟನೆ ಕಾರ್ಯದರ್ಶಿಯಾಗಿ ಸಂಜಯ ಪವಾರ ಮುದಬಾಳ (ಬಿ), ಸಹ ಸಂಘಟನೆ ಕಾರ್ಯದರ್ಶಿಯಾಗಿ ಪಂಡಿತ ಪವಾರ ರಂಜಣಗಿ, ಕಾರ್ಯದರ್ಶಿಯಾಗಿ ಅಂಜುನಾ ರಾಠೋಡ, ಸಹಕಾರ್ಯದರ್ಶಿಯಾಗಿ ಪುಲಸಿಂಗ್ ಬದಿನಿಹಾಳ ಹಾಗೂ ಖಜಾಂಚಿಯಾಗಿ ಉಮಾಜೀ ರಾಠೋಡ ಅವರನ್ನು ಆಯ್ಕೆ ಮಾಡಲಾಯಿತು. ಅದೇ ರೀತಿ ಉಪಾಧ್ಯಕ್ಷರಾಗಿ ರಮೇಶ್ ರಾಠೋಡ ಮುದಬಾಳ (ಬಿ), ಯೂತ್ ಉಪಾಧ್ಯಕ್ಷರಾಗಿ ತುಕಾರಾಂ ಜಾಧವ್ ಹಾಗೂ ಧರ್ಮು ಪವಾರ ಗಂವ್ಹಾರ, ಕಾರ್ಯಾಧ್ಯಕ್ಷರಾಗಿ ಅಪ್ಪು ಪವಾರ ರೇವನೂರ ಮತ್ತು ಉಪಾಧ್ಯಕ್ಷರಾಗಿ ಗೋವಿಂದ ಚವ್ಹಾಣ ರೇವನೂರ ಅವರನ್ನು ಆಯ್ಕೆ ಮಾಡಲಾಯಿತು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಬಹದ್ದೂರ್ ಎಸ್. ರಾಠೋಡ ಮಂದೇವಾಲ, ಸಮಾಜದ ಅಭಿವೃದ್ಧಿ ಮತ್ತು ಜಾಗೃತಿಗಾಗಿ ಸಂಘಟನೆ ಅತ್ಯಂತ ಅಗತ್ಯವಾಗಿದೆ. ಸಮಾಜದ ಪ್ರತಿಯೊಬ್ಬರೂ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಮುನ್ನಡೆಯಬೇಕು. ಶಿಕ್ಷಣ, ಉದ್ಯೋಗ, ಯುವಕರ ಭವಿಷ್ಯ ಹಾಗೂ ಸಮಾಜದ ವಿವಿಧ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತವಾಗಿ ಹೋರಾಟ ನಡೆಸಲಾಗುವುದು ಎಂದು ಹೇಳಿದರು. ಸಭೆಯಲ್ಲಿ ವಿವಿಧ ತಾಂಡಾಗಳ ಪ್ರಮುಖರು, ಸಮಾಜದ ಹಿರಿಯ ಮುಖಂಡರು, ಯುವಕರು ಹಾಗೂ ಸಮಾಜದ ಅನೇಕ ಪ್ರಮುಖರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನೂತನ ಪದಾಧಿಕಾರಿಗಳಿಗೆ ಶುಭ ಹಾರೈಸಿದರು. ನೂತನ ಆಡಳಿತ ಮಂಡಳಿಯ ನೇತೃತ್ವದಲ್ಲಿ ತಾಲೂಕು ಬಂಜಾರಾ ಸಮಾಜ ಇನ್ನಷ್ಟು ಸಂಘಟಿತವಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಲಿದೆ ಎಂಬ ವಿಶ್ವಾಸವನ್ನು ಮುಖಂಡರು ವ್ಯಕ್ತಪಡಿಸಿದರು

## ಈದ್ ಮಿಲಾದ್ ಮೆರವಣಿಗೆ ಘರ್ಷಣೆ : 3 ಎಫ್ಐಆರ್, 8 ಮಂದಿ ವಶಕ್ಕೆ

ವಿಜಯ ದುಂಬಿ ಸುದ್ದಿ....

**ಬೆಂಗಳೂರು: ಬಸವನಗುಡಿಯ ಕೆ.ಆರ್. ರಸ್ತೆ ಮಾರ್ಗವಾಗಿ ಬರುತ್ತಿದ್ದ ಈದ್ ಮಿಲಾದ್ ಮೆರವಣಿಗೆ ವೇಳೆ ನಡೆದ ಘರ್ಷಣೆ ಸಂಬಂಧ ಎಫ್ಐಆರ್ ದಾಖಲಾಗಿದ್ದು 8 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.**

ಪುನೀತ್ ಕೆರೆಹಳ್ಳಿ ಬೆಂಬಲಿಗರ ವಿರುದ್ಧ ಮುಸ್ಲಿಂ ಮುಖಂಡ



ಅಬ್ದುಲ್ ರಜಾಕ್ ನೀಡಿರುವ ದೂರಿನಡಿ ಬಸವನಗುಡಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ. ಈದ್ ಮಿಲಾದ್ ಆಚರಣೆಯ ಮೆರವಣಿಗೆಯು ಕುಮಾರಸ್ವಾಮಿ ಲೇಔಟ್, ಕೋಣನಕುಂಟೆ, ಯರಬ್ ನಗರ ಮತ್ತು ಬನಶಂಕರಿ ಪ್ರದೇಶಗಳಿಂದ ಹೊರಟು ಎನ್.ಆರ್. ರಸ್ತೆ ಮೂಲಕ ವೈ–ಎಂಸಿಎ ಕಡೆಗೆ ಬರುವ ವೇಳೆ, 3:45 ರಿಂದ 4 ಗಂಟೆಯ ಸಮಯದಲ್ಲಿ ಪೊಲೀಸರಿಗೆ 112ಕ್ಕೆ ಕರೆ ಬಂದಿದ್ದು, ಕೆಲವರು ರಸ್ತೆಯನ್ನು ತಡೆದಿದ್ದಾರೆ ಎಂದು ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದರು ಎನ್ನಲಾಗಿದೆ. ಕೋಮು ಸೌಹಾರ್ದತೆಗೆ ಧಕ್ಕೆ ತಂದ ಆರೋಪ, ಗುಂಪುಗಳ ನಡುವೆ ಶತ್ರುತ್ವ ಆರೋಪದಡಿ ಪುನೀತ್ ಕೆರೆಹಳ್ಳಿ, ಗೋಪಿ ಗೌಡ, ಪುನೀತ್ ಗೌಡ, ವಿನೋದ್ ನಟಯಕ್ ಹಾಗೂ ಮತ್ತಿತರ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ. ಎರಡನೇಯದಾಗಿ, ಕೊಲೆ ಯತ್ನ ಹಾಗೂ ಎಸ್?ಸಿ, ಎಸ್ಪಿ ದೌರ್ಜನ್ಯ ತಡೆ ಕಾಯ್ದೆ ಅಡಿ ಕಮಲ್ ಪಾಷಾ, ಅಬೂಬಕರ್ ಸಿದ್ದೀಕ್, ಸೈಯದ್ ಅನಾಸ್ ಎಂಬುವವರ ವಿರುದ್ಧ ಕೇಸ್ ದಾಖಲಿಸಲಾಗಿದೆ. ಪ್ರಕರಣ ಸಂಬಂಧ ಮೂವರನ್ನ ಬಂಧಿಸಿ ತನಿಖೆ ನಡೆಸಲಾಗುತ್ತಿದ್ದು, ಮೂವರು ಅಪ್ರಾಪ್ತರನ್ನೂ ವಶಕ್ಕೆ ಪಡೆಯಲಾಗಿದೆ. ಮೂರನೇಯದಾಗಿ, ಸಾರ್ವಜನಿಕ ರಸ್ತೆ ತಡೆ ಹಾಗೂ ಸಂಚಾರಕ್ಕೆ ಅಡ್ಡಿ ಆರೋಪದಡಿ ಎಫ್ಐಆರ್ ದಾಖಲಿಸಲಾಗಿದೆ. ಘಟನೆ ಸ್ಥಳದಲ್ಲಿದ್ದ ವ್ಯಕ್ತಿಗಳ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ. ಸದ್ಯ ಘಟನೆ ಸ್ಥಳದಲ್ಲಿ ಪೊಲೀಸರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಕೆಎಸ್?ಆರ್?ಪಿ ತುಕಡಿ ನಿಯೋಜಿಸಿ ಬಂದೋಬಸ್ತ್ ಮಾಡಲಾಗಿದೆ. ಅಲ್ಲದೇ ಸ್ಥಳೀಯ ಪೊಲೀಸರಿಂದ ಗಸ್ತು ಮುಂದುವರಿಕೆ ಮಾಡಲಾಗಿದೆ. ಘಟನಾ ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿ ದೌಡಾಯಿಸಿದ್ದರು. ಪ್ರಸ್ತುತ, ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಘಟನೆಯ ಕುರಿತು ಹೆಚ್ಚಿನ ಮಾಹಿತಿ ತಿಳಿಯುವ ಪ್ರಯತ್ನ ನಡೆದಿದೆ. ಎರಡೂ ಕಡೆಯಿಂದಲೂ ದೂರುಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಛತ್ತೀಸ್‌ಗಢದ ರಾಯಪುರ ಕೃಷಿ ವಿವಿಯಲ್ಲಿ ಮತ್ತೊಂದು ಪ್ರಶ್ನೆಪತ್ರಿಕೆ ಸೋರಿಕೆ

ವಿಜಯ ದುಂಬಿ ಸುದ್ದಿ....

**ರಾಯಪುರ: ಛತ್ತೀಸ್‌ಗಢದ ರಾಯಪುರದಲ್ಲಿರುವ ಸರ್ಕಾರಿ ಸ್ವಾಮ್ಯದ ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯದಲ್ಲಿ (ಐಜಿಕೆವಿ) ಬಿಎಸ್‌ಸಿ ಕೃಷಿಯ ಮತ್ತೊಂದು ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪ ಕೇಳಿಬಂದಿದೆ.ಈ ಕುರಿತು ಪೊಲೀಸ್ ತನಿಖೆ ನಡೆಸುವಂತೆ ವಿಶ್ವವಿದ್ಯಾಲಯ ಮನವಿ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.**

ಈ ಹಿಂದೆ ಬಿಎಸ್‌ಸಿ ಕೃಷಿಯ ಎರಡು ವಿಷಯಗಳ




ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿವೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಆ ಪರೀಕ್ಷೆಗಳನ್ನು ರದ್ದುಗೊಳಿಸಲಾಗಿತ್ತು. ಇದೀಗ ಎಪಿಬಿ–5121 (ಜೆನೆಟಿಕ್ಸ್‌ನ ಮೂಲಭೂತ ಅಂಶಗಳು) ವಿಷಯದ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ಆರೋಪ ಕೇಳಿಬಂದಿದೆ. ಆ.19ರಂದು ರಾಜ್ಯದ 28 ಕೃಷಿ ಕಾಲೇಜುಗಳಲ್ಲಿ ಈ ಪರೀಕ್ಷೆ ನಡೆದಿತ್ತು. ಈ ಕುರಿತು ಮಾಧ್ಯಮಗಳಲ್ಲಿ ವರದಿ ಪ್ರಕಟವಾದ ಬಳಿಕ ಪ್ರಕರಣ ಬೆಳಕಿಗೆ ಬಂದಿದ್ದು, ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ದೂರಿನಲ್ಲೂ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಉಲ್ಲೇಖಿಸಲಾಗಿದೆ. ಪ್ರಕರಣದ ಪರಿಶೀಲನೆಗಾಗಿ ವಿಶ್ವವಿದ್ಯಾಲಯ ಐವರು ಸದಸ್ಯರ ಸಮಿತಿಯನ್ನು ರಚಿಸಿತ್ತು. ಪ್ರಾಥಮಿಕ ತನಿಖೆಯ ವೇಳೆ ಸಮಿತಿಯು ಕೃಷಿ ಕಾಲೇಜೊಂದಕ್ಕೆ ಕಳುಹಿಸಲಾಗಿದ್ದ ಬಳಿಕ ವಿಶ್ವವಿದ್ಯಾಲಯಕ್ಕೆ ವಾಪಸ್ ಬಂದ ಪ್ರಶ್ನೆಪತ್ರಿಕೆಗಳ ಲಕೋಟೆಗಳನ್ನು ಪರಿಶೀಲಿಸಿದೆ. ಈ ವೇಳೆ ಕೆಲವು ಲಕೋಟೆಗಳಲ್ಲಿ ಮೇಲ್ನೋಟಕ್ಕೆ ಕಳ್ಳತನ ಅಥವಾ ಹಸ್ತಕ್ಷೇಪದ ಗುರುತುಗಳು ಕಂಡುಬಂದಿವೆ ಎಂದು ವಿಶ್ವವಿದ್ಯಾಲಯ ತಿಳಿಸಿದೆ. ಜೆನೆಟಿಕ್ಸ್‌ನ ಮೂಲಭೂತ ಅಂಶಗಳ ಪ್ರಶ್ನೆಪತ್ರಿಕೆ ಹೊಂದಿದ್ದ ಲಕೋಟೆಯಲ್ಲಿಯೂ ಇಂತಹ ಗುರುತುಗಳು ಪತ್ತೆಯಾಗಿದ್ದು, ಈ ಹಿಂದೆ ಪೊಲೀಸ್ ತನಿಖೆಗೆ ಒಳಪಟ್ಟಿದ್ದ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕಂಡುಬಂದ ಗುರುತುಗಳಿಗೆ ಹೋಲಿಕೆಯಾಗಿವೆ ಎಂದು ವಿಶ್ವವಿದ್ಯಾಲಯ ಹೇಳಿದೆ. ಈ ಕುರಿತು ದೂರು ಸ್ವೀಕರಿಸಲಾಗಿದ್ದು, ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಆಗಸ್ಟ್ 31 ರಂದು ರಬಕವಿ ಮಲ್ಲಿಕಾರ್ಜುನ ರಥೋತ್ಸವ

ವಿಜಯ ದುಂಬಿ ಸುದ್ದಿ....

**ರಬಕವಿ–ಬನಹಟ್ಟಿ: ನಗರದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ರಬಕವಿಯ ಮಲ್ಲಿಕಾರ್ಜುನ ಜಾತ್ರೆಯು ದಿ.31 ರಂದು ಶ್ರಾವಣದ 3 ನೇ ಸೋಮವಾರದಂದು 8 ದಿನಗಳ ಕಾಲ ಜರುಗಲಿದೆಯೆಂದು ಅಧ್ಯಕ್ಷ ಶಂಕರಲಿಂಗ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಬಾಲಚಂದ್ರ ಉಮದಿ ಹೇಳಿದರು.**

ದಿ.31 ರಂದು ಬೆಳಿಗ್ಗೆ ಭ್ರಮರಾಂಭದೇವಿ ಹಾಗೂ ಮಲ್ಲಿಕಾರ್ಜುನ ದೇವರಿಗೆ ವಿಶೇಷ ಅಲಂಕಾರ, ಅಭಿಷೇಕ ಪೂಜೆ ನಡೆಯುವವು. ಮದ್ಯಾನ 4 ಕ್ಕೆ ಶಂಕರಲಿಂಗ ದೇವಸ್ಥಾನದಲ್ಲಿ ಕರಡಿ ಮಜಲು ಪ್ರದರ್ಶನ ನಡೆಯುತ್ತವೆ. ರಥದ ಕಳಸವನ್ನು ಮಲ್ಲಿಕಾರ್ಜುನ ದೇವಸ್ಥಾನಕ್ಕೆ ತೆಗೆದುಕೊಂಡು ಪೂಜೆ ಸಲ್ಲಿಸಿದ ಬಳಿಕ ಕಳಸಾರೋಹಣ ನೆರವೇರಿಸಲಾಗುವುದು. ಮಹಾಲಿಂಗಪುರ ಮಹಾಲಿಂಗೇಶ್ವರ ಮತ್ತು ಮಲ್ಲಿಕಾರ್ಜುನ ದೇವರ ಉತ್ಸವ ಮೂರ್ತಿಗಳನ್ನು ರಥದಲ್ಲಿ ಪ್ರತಿಷ್ಠಾಪಿಸಿದ ಬಳಿಕ ರಥೋತ್ಸವ ಜರುಗುವುದು. ರಾತ್ರಿ 10 ಕ್ಕೆ ಮಲ್ಲಿಕಾರ್ಜನ ನಾಟ್ಯ ಸಂಘ ಮತ್ತು ಬ್ರಹ್ಮಾನಂದ ನಾಟ್ಯಸಂಘಗಳ




ನಾಟಕ ಪ್ರದರ್ಶನ ಜರುಗುವುದು. ಮಂಗಳವಾರ ಸೆ.1 ರಂದು ಮುಂಜಾನೆ 10 ರಿಂದ 4 ರ ವರೆಗೆ ಅನ್ನಸಂತರ್ಪಣೆ ನಡೆಯುವುದು.

250 ಕ್ಕೂ ಅಧಿಕ ಪಲ್ಲಕ್ಕಿಗಳೊಡನೆ ಬಂದ ಯಾತ್ರಿಕರಿಗೆ ಬಸವರಾಜ ದಲಾಲ ಹಾಗೂ ಜಯಪ್ರಕಾಶ ಸೊಲ್ಲಾಪುರ ಉಪಹಾರ ವ್ಯವಸ್ಥೆ ಮಾಡಿದ್ದಾರೆ. ಸಂಜೆ 4 ರಿಂದ ರಾಷ್ಟಂಮಟ್ಟದ ಜಂಗಿ ಇಕಾಲಿ ಕುಸ್ತಿ ಪಂದ್ಯಗಳು ಜರುಗಲಿವೆ. ರಾತ್ರಿ 10 ಕ್ಕೆ ನಾಟಕ ಪ್ರದರ್ಶನ ನಡೆಯುವುದು. ಬುಧವಾರ ಮುಂಜಾನೆ 10 ಕ್ಕೆ ಟ್ರಸ್ಟ್ ಆಡಳಿತ ಮಂಡಳಿಯಿಂದ ಕೃಷ್ಣಾ ನದಿಗೆ ಬಾಗಿನ ಸಮರ್ಪಣೆ, ಸಂಜೆ 6 ಕ್ಕೆ ಕಳಸ ಇಳಿಸುವುದು ಮತ್ತು ಕರಡಿ ಮಜಲು ಕಾರ್ಯಕ್ರಮ ಜರುಗಲಿವೆ. ರಬಕವಿ ಜಾತ್ರೆಗೆ ರಬಕವಿ–ಬನಹಟ್ಟಿ, ಜಮಖಂಡಿ, ಮುಧೋಳ, ಮೂಡಲಗಿ, ಗೋಕಾಕ, ರಾಯಭಾಗ, ಅಥಣಿ ತಾಲೂಕುಗಳ ನಗರ ಹಾಗೂ ಗ್ರಾಮೀಣ ಭಾಗಗಳ ಸಹಸ್ರಾರು ಭಕ್ತರು 2ಟ250 ಕ್ಕೂ ಹೆಚ್ಚಿನ ದೇವರ ಪಾಲಕಿಗಳೊಡನೆ ಆಗಮಿಸಿ ಕೃಷ್ಣೆಯಲ್ಲಿ ಪುಣ್ಯಸ್ನಾನ ಮಾಡಿ ರಥೋತ್ಸವದಲ್ಲಿ ಪಾಲ್ಗೊಳ್ಳುವ ಪರಂಪರೆ 4 ಶತಮಾನಗಳಿಂದ ನಡೆದು ಬಂದಿದೆ. ಮಸಗುಪ್ಪಿ, ಗೋಕಾಕ, ಅರಭಾಂವಿ, ಮೂಡಲಗಿ, ಮುಧೋಳ, ವಿಜಯಪುರ ಮೊದಲಾದ ಗ್ರಾಮೀಣ ಭಾಗಗಳ ಸುಮಾರು 150 ಕ್ಕೂ ಅಧಿಕ ಪಲ್ಲಕ್ಕಿಗಳೊಡನೆ ಬರುವ ಭಕ್ತರು 8 ದಿನಗಳ ಕಾಲ ಶಂಕರಲಿಂಗ ದೇವಸ್ಥಾನದ ಆವರಣದಲ್ಲಿ ವಾಸ್ತವ್ಯ ಹೂಡುತ್ತಾರೆ.

ರಬಕವಿ ಜಾತ್ರೆಗೆ ಪಲ್ಲಕ್ಕಿಗಳ ಜಾತ್ರೆ ಎಂದು ಕರೆಯುತ್ತಾರೆ. ಇದೇ ಸಂದರ್ಭದಲ್ಲಿ ಪ್ರಭು ಉಮದಿ. ಮಾರುತಿ ನಾಯಕ. ಡಾ ಸಂಗಮೇಶ ಹತ್ತಪಕಿ.ಬಿಮಶಿ ಪಾಟೀಲ. ಗಿರಿಮಲ್ಲಪ್ಪ ತೇಲಿ ಬಸವರಾಜ ದಲಾಲ.ಶಿವಾನಂದ ಹೊಸಮನಿ ಶಿವಾನಂದ ಕಡಕೋಳ ಜಯವಂತ ಸೊಲ್ಲಾಪುರ ಮಹಾದೇವ ತಳವಾರ ಸೇ–ರಿದಂತೆ ಮುಂತಾದವರು ಪಾಲ್ಗೊಂಡಿದ್ದರು

# 1 ಲಕ್ಷ ಮರಗಳಿಗೆ ರಾಖಿ ಕಟ್ಟಿ 'ರಕ್ಷಾ ಬಂಧನ್' ಆಚರಣೆ

ವಿಜಯ ದುಂಬಿ ಸುದ್ದಿ....

**ರಾಂಚಿ: ಮಾನವ ಮತ್ತು ಪ್ರಕೃತಿಯ ನಡುವಿನ ಭಾವನಾತ್ಮಕ ಬಾಂಧವ್ಯವನ್ನು ಬಲಪಡಿಸುವ ಉದ್ದೇಶದಿಂದ ರಕ್ಷಾ ಬಂಧನದ ಸಂದರ್ಭದಲ್ಲಿ ಜಾರ್ಖಂಡ್‌ನ 700 ಹಳ್ಳಿಗಳ ಸಾವಿರಾರು ಗ್ರಾಮಸ್ಥರು ನಾಳೆ ಸುಮಾರು ಒಂದು ಲಕ್ಷ ಮರಗಳಿಗೆ ರಾಖಿ ಕಟ್ಟಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

24 ಜಿಲ್ಲೆಗಳ ಆಯ್ದ ಹಳ್ಳಿಗಳಲ್ಲಿ ಮೂರು ಲಕ್ಷ ಮರಗಳಿಗೆ ರಾಖಿ ಕಟ್ಟುವ ಗುರಿಯೊಂದಿಗೆ ಒಂದು ತಿಂಗಳ ಕಾಲ ನಡೆಯಲಿರುವ 'ಮರ ಉಳಿಸಿ' ಅಭಿಯಾನದ ಭಾಗವಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಸಂಜೀವ್ ಕುಮಾರ್ ಪಿಟಿಐಗೆ ತಿಳಿಸಿದ್ದಾರೆ. ಗುಮ್ಲಾ ಜಿಲ್ಲೆಯ ಜೋರಾದ್ ಗ್ರಾಮದಲ್ಲಿ ನಾಳೆ ಮರಕ್ಕೆ ರಾಖಿ ಕಟ್ಟುವ ಮೂಲಕ ಕುಮಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. "ರಕ್ಷಾ ಬಂಧನವು ಸಹೋದರ–ಸಹೋದರಿಯರ ನಡುವಿನ ಬಾಂಧವ್ಯದ ಹಬ್ಬ. ಈ ದಿನ ಸಹೋದರರು ತಮ್ಮ ಸಹೋದರಿಯರನ್ನು ರಕ್ಷಿಸುವ ಪ್ರತಿಜ್ಞೆ ಮಾಡುತ್ತಾರೆ. ಅದೇ ರೀತಿ, ನಮ್ಮ ಜೀವನ ಅವಲಂಬಿಸಿರುವ ಪರಿಸರವನ್ನು ರಕ್ಷಿಸುವುದು ನಮ್ಮ ಅತ್ಯುನ್ನತ ಕರ್ತವ್ಯವಾಗಿದೆ" ಎಂದು ಕುಮಾರ್ ಹೇಳಿದ್ದಾರೆ.

ಜನರು ಪ್ರಕೃತಿಯೊಂದಿಗೆ ಭಾವನಾತ್ಮಕವಾಗಿ ಬೆರೆಯುವಂತೆ ಮಾಡುವುದು ಈ ಅಭಿಯಾನದ ಉದ್ದೇಶವಾಗಿದೆ. ರಾಖಿ ಕಟ್ಟುವ ಮೂಲಕ ಮರಗಳನ್ನು ಸಂರಕ್ಷಿಸುವ ಪ್ರತಿಜ್ಞೆ ಮಾಡಲಾಗುತ್ತದೆ. ರಕ್ಷಾ ಬಂಧನದ ದಿನ 700 ಹಳ್ಳಿಗಳ ಸುಮಾರು ಒಂದು ಲಕ್ಷ ಮರಗಳಿಗೆ ರಾಖಿ ಕಟ್ಟುವ ಗುರಿ ಹೊಂದಲಾಗಿದ್ದು, ಒಂದು ತಿಂಗಳ ಅವಧಿಯಲ್ಲಿ 24 ಜಿಲ್ಲೆಗಳ ಸುಮಾರು ಮೂರು ಲಕ್ಷ ಮರಗಳಿಗೆ ರಾಖಿ ಕಟ್ಟಲಾಗುವುದು ಎಂದು ಅವರು ತಿಳಿಸಿದ್ದಾರೆ. 2004ರಲ್ಲಿ ಆರಂಭವಾದ ಅಭಿಯಾನ ಕುಮಾರ್ ಅವರ ಪರಿಕಲ್ಪನೆಯ ಈ ಉಪಕ್ರಮವು 2004ರಲ್ಲಿ ಧನ್ಬಾದ್ ಜಿಲ್ಲೆಯ ತುಂಡಿ ಬ್ಲಾಕ್‌ನ ಮಾವೋವಾದಿ ಪೀಡಿತ ಲುಕೈಯಾ ಗ್ರಾಮದಿಂದ ಆರಂಭವಾಯಿತು.

ಅಂದಿನಿಂದ ರಾಜ್ಯಾದ್ಯಂತ 12,000ಕ್ಕೂ ಹೆಚ್ಚು ಹಳ್ಳಿಗಳನ್ನು ಈ ಕಾರ್ಯಕ್ರಮದೊಂದಿಗೆ ಸಂಪರ್ಕಿಸಲಾಗಿದೆ



ಎಂದು ಅವರು ಹೇಳಿದ್ದಾರೆ. ಈ ಉಪಕ್ರಮದ ಮೂಲಕ ಲುಕೈಯಾ ಗ್ರಾಮದಲ್ಲಿ 20,000ಕ್ಕೂ ಹೆಚ್ಚು ಮಹುವಾ ಮರಗಳನ್ನು ಸಂರಕ್ಷಿಸಲಾಗಿದೆ.

ಈ ಮರಗಳು ಈಗ ಗ್ರಾಮಸ್ಥರ ಜೀವನೋಪಾಯಕ್ಕೆ ಗಮನಾರ್ಹ ಕೊಡುಗೆ ನೀಡುತ್ತಿವೆ. ಇದು ಒಂದೇ ಗ್ರಾಮದ ಉದಾಹರಣೆಯಲ್ಲ. ಈ ಅಭಿಯಾನದಿಂದ ಹಲವು ಹಳ್ಳಿಗಳಲ್ಲಿ ಸಣ್ಣ ಅರಣ್ಯ ಉತ್ಪನ್ನಗಳ ಲಭ್ಯತೆ ಹೆಚ್ಚಿದ್ದು, ಅವು ಗ್ರಾಮಸ್ಥರ ಜೀವನೋಪಾಯಕ್ಕೆ ನೆರವಾಗಿವೆ ಎಂದು ಕುಮಾರ್ ತಿಳಿಸಿದ್ದಾರೆ. ಜಾರ್ಖಂಡ್‌ನ ಅರಣ್ಯ ವ್ಯಾಪ್ತಿಯನ್ನು ಹೆಚ್ಚಿಸುವಲ್ಲಿಯೂ ಈ ಉಪಕ್ರಮ ಮಹತ್ವದ ಪಾತ್ರ ವಹಿಸಿದೆ ಎಂದು ಅವರು ಹೇಳಿದ್ದಾರೆ.

# ಆರ್‌ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದ ಇಬ್ಬರು ಶಿಕ್ಷಕರ ಅಮಾನತು

ವಿಜಯ ದುಂಬಿ ಸುದ್ದಿ....

**ಬೆಂಗಳೂರು: ಸರ್ಕಾರಿ ಸೇವೆಯಲ್ಲಿದ್ದುಕೊಂಡು ಸೇವಾ ನಿಯಮಗಳನ್ನು ಉಲ್ಲಂಘಿಸಿ ಆರ್–ಎಸ್‌ಎಸ್ ಪಥಸಂಚಲನದಲ್ಲಿ ಭಾಗಿಯಾಗಿದ್ದ ಯಾದಗಿರಿ ಜಿಲ್ಲೆಯ ಇಬ್ಬರು ಸರ್ಕಾರಿ ಶಾಲಾ ಶಿಕ್ಷಕರನ್ನು ಘಟನೆ ನಡೆದ ಸುಮಾರು 9 ತಿಂಗಳ ಬಳಿಕ ಅಮಾನತುಗೊಳಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.ಹುಣಸಗಿ ಬಾಲಕಿಂ–ಯರ ಪ್ರೌಢಶಾಲೆಯ ಶಿಕ್ಷಕ ಗುರುರಾಜ್ ಜೋಶಿ ಹಾಗೂ ಕುಪ್ಪಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥ–ಮಿಕ ಶಾಲೆಯ ಮುಖ್ಯ ಶಿಕ್ಷಕ ಅಣ್ಣಾಸಾಹೇಬ್ ದೇಶಮುಖ್ ಅಮಾನತುಗೊಂಡವರು.**

ಅಂಬೇಡ್ಕರ್ ಸ್ವಾಭಿಮಾನಿ ಸೇನೆ ನೀಡಿದ ದೂರು ಹಾಗೂ ಮಾಜಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಪತ್ರದ ಆಧಾರದ ಮೇಲೆ ಯಾದಗಿರಿ ಡಿಡಿಪಿಐ ಚನ್ನಬಸಪ್ಪ ಮುದೋಳ್ ಅವರು ಈ ಆದೇಶ ಹೊರಡಿಸಿದ್ದಾರೆ. ಆರ್‌ಎಸ್‌ಎಸ್ ಶತಮಾನೋತ್ಸವದ ಅಂಗವಾಗಿ ಕಳೆದ ವರ್ಷ ನವೆಂಬರ್‌ನಲ್ಲಿ ವಿಜಯಪುರ ಜಿಲ್ಲೆಯ ತಾಳಿಕೋಟಿ ಪಟ್ಟಣದಲ್ಲಿ ಬೃಹತ್ ಪಥಸಂಚಲನ ಆಯೋಜಿಸಲಾಗಿತ್ತು. ಈ



ಕಾರ್ಯಕ್ರಮದಲ್ಲಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಹುಣಸಗಿ ಬಾಲಕಿಂ–ಯರ ಪ್ರೌಢಶಾಲೆಯ ಶಿಕ್ಷಕ ಗುರುರಾಜ್ ಜೋಶಿ ಹಾಗೂ ಕುಪ್ಪಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಅಣ್ಣಾಸಾಹೇಬ್ ದೇಶಮುಖ್ ಸಕ್ರಿಯವಾಗಿ ಭಾಗವಹಿಸಿದ್ದರು ಎನ್ನಲಾಗಿದೆ.

ಸರ್ಕಾರಿ ನೌಕರರು ಯಾವುದೇ ರಾಜಕೀಯ ಅಥವಾ ಸಿದ್ಧಾಂತ ಆಧಾ–ರಿತ ಸಂಘಟನೆಗಳ ಚಟುವಟಿಕೆಗಳು ಹಾಗೂ ಪಥಸಂಚಲನಗಳಲ್ಲಿ ಪಾಲ್ಗೊಳ್ಳಬಾರದು ಎಂಬ ಸೇವಾ ನಿಯಮವಿದೆ. ಇದನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಮುಖಂಡರು ನಿರಂತರವಾಗಿ ದೂರುಗಳನ್ನು ಸಲ್ಲಿಸಿದ್ದರು. ಈ ಕುರಿತು ಸಂಘಟನೆಯು ಅಂದು ಸಚಿವರಾಗಿದ್ದ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಸಲ್ಲಿಸಿತ್ತು. ದೂರಿನ ಗಂಭೀರತೆಯನ್ನು ಪರಿಗಣಿಸಿದ ಪ್ರಿಯಾಂಕ್ ಖರ್ಗೆ ಅವರು ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವ–ರಿಗೆ ಪತ್ರ ಬರೆದು ಒತ್ತಾಯಿಸಿದ್ದರು.

ದೂರು ಸಲ್ಲಿಕೆಯಾಗಿ ತಿಂಗಳುಗಳೇ ಕಳೆದರೂ ಆರಂಭದಲ್ಲಿ ಯಾವುದೇ ತಕ್ಷಣದ ಕ್ರಮ ಕೈಗೊಳ್ಳಲಾಗಿರಲಿಲ್ಲ. ಆದರೆ, ಇಲಾಖಾ ತನಿಖೆ ಹಾಗೂ ಮೇಲಧಿಕಾರಿಗಳ ಸೂಚನೆಗಳ ಬಳಿಕ ನಿಯಮ ಉಲ್ಲಂಘನೆ ಸಾಬೀತಾಗಿದೆ ಎಂಬ ಆಧಾರದ ಮೇಲೆ ಶಿಕ್ಷಣ ಇಲಾಖೆ ಇಬ್ಬರು ಶಿಕ್ಷಕರನ್ನು ಅಮಾನತುಗೊಳಿಸಿ ಇದೀಗ ಅಧಿಕೃತ ಆದೇಶ ಹೊರಡಿಸಿದೆ. ಘಟನೆ ನಡೆದು ಸುಮಾರು 9 ತಿಂಗಳ ಬಳಿಕ ಕೈಗೊಂಡಿರುವ ಈ ಕ್ರಮವು ಶೈಕ್ಷಣಿಕ ವಲಯ ಹಾಗೂ ಸ್ಥಳೀಯವಾಗಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

VIJAYA DUMBI
KANNADA DAILY NEWS PAPER



# ಪ್ರವಾಹದಿಂದ ನೇಪಾಳ ತತ್ತರ : ಸಾವಿನ ಸಂಖ್ಯೆ 165ಕ್ಕೆ ಏರಿಕೆ, 823 ಮಂದಿ ನಾಪತ್ತೆ, ನೆರವಿಗೆ ನಿಂತ ಭಾರತ

ವಿಜಯ ದುಂಬಿ ಸುದ್ದಿ....



**ಕಠ್ಮಂಡು: ನೇಪಾಳದ ಟಿಬೆಟ್ ಗಡಿ ಪ್ರದೇಶದ ಭೋಟೆ ಕೋಶಿ ನದಿಯಲ್ಲಿ ಸಂಭವಿಸಿದ ವಿನಾಶಕಾರಿ ಹಠಾತ್ ಪ್ರವಾಹದಿಂದ ಅಪಾರ ಸಾವುನೋವು ಸಂಭವಿಸಿದ್ದು, ದೇಶದಲ್ಲಿ ತೀವ್ರ ಆತಂಕದ ವಾತಾವರಣ ನಿರ್ಮಾಣವಾಗಿದೆ.ಹಿಮನದಿ ಕುಸಿತ ಹಾಗೂ ಭೂಕಂಪನ ಚಟುವಟಿಕೆಯಿಂದ ಉಂಟಾದ ಈ ದುರಂತದಲ್ಲಿ ಸಾವಿನ ಸಂಖ್ಯೆ 165ಕ್ಕೆ ಏರಿಕೆಯಾಗಿದೆ ಎಂದು ನೇಪಾಳ ಪೊಲೀಸರು ಹಾಗೂ ರಾಷ್ಟ್ರೀಯ ವಿಪತ್ತು ಅಪಾಯ ಕಡಿತ ಮತ್ತು ನಿರ್ವಹಣಾ ಪ್ರಾಧಿಕಾರ ದೃಢಪಡಿಸಿದೆ.**

ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ 300ಕ್ಕೂ ಹೆಚ್ಚು ಭಾರತೀಯರು ನಾಪತ್ತೆಯಾಗಿರುವ ಸಾಧ್ಯತೆಯಿದೆ ಎಂದು ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ತಿಳಿಸಿದ್ದಾರೆ. ಸಂವಹನ ಜಾಲಗಳು ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದರಿಂದ ಅವರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದು ನೇಪಾಳದಲ್ಲಿರುವ ಭಾರತೀಯ ರಾಯಭಾರಿ ನವೀನ್ ಶ್ರೀವಾಸ್ತವ ತಿಳಿಸಿದ್ದಾರೆ. ನೇಪಾಳದ ವಿಪತ್ತು ನಿರ್ವಹಣಾ ಸಂಸ್ಥೆಯ ಪ್ರಕಾರ, ಒಟ್ಟು 823 ಮಂದಿ ಇನ್ನೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಇವರಲ್ಲಿ ನೂರಾರು ವಿದೇಶಿ ಪ್ರವಾಸಿಗರು ಹಾಗೂ ಸ್ಥಳೀಯರು ಸೇರಿದ್ದಾರೆ. ಚೀನಾದ ಸರ್ಕಾರಿ ಮಾಧ್ಯಮದ ವರದಿ ಪ್ರಕಾರ, ಟಿಬೆಟ್‌ನಲ್ಲೂ 260 ವಿದೇಶಿ ಪ್ರಜೆಗಳು ಸೇರಿದಂತೆ 558 ಮಂದಿ ನಾಪತ್ತೆಯಾಗಿದ್ದಾರೆ.ಅಮೆರಿಕ ಭೂವೈಜ್ಞಾನಿಕ ಸಮೀಕ್ಷೆಯ ಪ್ರಕಾರ, ಇದು ಸಾಂಪ್ರದಾಯಿಕ ಭೂಕಂಪದಿಂದ ಉಂಟಾದ ಪ್ರವಾಹವಲ್ಲ. ಬದಲಾಗಿ ಹಿಮನದಿ ಕುಸಿತ ಹಾಗೂ ಶಿಲಾಖಂಡರಾಶಿಗಳ ಹರಿವಿನಿಂದ ಉಂಟಾದ ಹಠಾತ್ ಪ್ರವಾಹವಾಗಿದೆ.

ಭಾರತದಿಂದ ನೆರವು

ಪ್ರಧಾನಿ ನರೇಂದ್ರ ಮೋದಿ ಅವರು ನೇಪಾಳದ ಪ್ರಧಾನಿ ಬಾಲೇಂದ್ರ ಶಾ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಅಗತ್ಯವಿರುವ ಎಲ್ಲ ಮಾನವೀಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ. ಇದರ ಭಾಗವಾಗಿ ಭಾರತೀಯ ವಾಯುಪಡೆಯ ಸಿ–130ಜೆ ವಿಮಾನದ ಮೂಲಕ 10 ಟನ್ ಪರಿಹಾರ ಸಾಮಗ್ರಿಗಳನ್ನು ನೇಪಾಳಕ್ಕೆ ಕಳುಹಿಸಲಾಗಿದೆ. ಔಷಧಿಗಳು, ತಾತ್ಕಾಲಿಕ ಆಶ್ರಯ ಸಾಮಗ್ರಿಗಳು ಹಾಗೂ ಕಂಬಳಿಗಳು ಇದರಲ್ಲಿ ಸೇರಿವೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ತಿಳಿಸಿದ್ದಾರೆ.

ರಾಜ್ಯಗಳ ಸಹಾಯವಾಣಿ

ಕರ್ನಾಟಕ, ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳು ತಮ್ಮ ತುರ್ತು ಸಹಾಯವಾಣಿಗಳನ್ನು ಸಕ್ರಿಯಗೊಳಿಸಿವೆ.

ಕರ್ನಾಟಕದ ನಿವಾಸಿಗಳು ನೆರವಿಗಾಗಿ 1070 ಅಥವಾ 080–22253707 ಸಂಖ್ಯೆಗೆ ಸಂಪರ್ಕಿಸಬಹುದು.ಅಮೆರಿಕ ಸರ್ಕಾರ 5 ಲಕ್ಷ ಡಾಲರ್ ತುರ್ತು ನೆರವು ಘೋಷಿಸಿದ್ದು, ಪರಿಣತರ ತಂಡವನ್ನೂ ಕಳುಹಿಸುತ್ತಿದೆ. ಆಸ್ಟ್ರೇಲಿಯಾ ಸರ್ಕಾರ ತನ್ನ ನಾಪತ್ತೆಯಾದ ನಾಗರಿಕರ ಪತ್ತೆಗೂ ಕ್ರಮ ಕೈಗೊಂಡಿದೆ. ಭಾರತದ ಗಡಿ ಜಿಲ್ಲೆಗಳಾದ ಉತ್ತರ ಪ್ರದೇಶ, ಬಿಹಾರ ಹಾಗೂ ಉತ್ತರಾಖಂಡದಲ್ಲಿ ನದಿ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಹೈಅಲರ್ಟ್ ಘೋಷಿಸಲಾಗಿದೆ. ರಕ್ಷಣಾ ಪಡೆಗಳು ಹಾಗೂ ಹೆಲಿಕಾಪ್ಟರ್‌ಗಳ ನೆರವಿನಿಂದ ಪೀಡಿತ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ.

ಭಾರತೀಯರ ಸ್ಥಿತಿ ಇನ್ನೂ ಆತಂಕಕಾರಿ

ಈ ದುರಂತದಲ್ಲಿ ಭಾರತೀಯರ ನಾಪತ್ತೆ ಕುರಿತು ವಿವಿಧ ಹಂತಗಳಲ್ಲಿ ವಿಭಿನ್ನ ಅಂಕಿ–ಅಂಶಗಳು ಹೊರಬಿದ್ದಿವೆ. ಆರಂಭದಲ್ಲಿ ನೇಪಾಳ ಪ್ರವಾಸೋದ್ಯಮ ಮಂಡಳಿಯ ಪಟ್ಟಿಯಲ್ಲಿ 105 ಭಾರತೀಯರು ಸೇರಿದಂತೆ 384 ಪ್ರವಾಸಿಗರು ನಾಪತ್ತೆಯಾಗಿದ್ದಾರೆ ಎಂದು ಗುರುತಿಸಲಾಗಿತ್ತು. ಬಳಿಕದ ಅಧಿಕೃತ ಮಾಹಿತಿಯಲ್ಲಿ ಕನಿಷ್ಠ 133 ಭಾರತೀಯರು ಹಾಗೂ 37 ಎನ್‌ಆರ್‌ಐಗಳು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ತಿಳಿಸಲಾಗಿತ್ತು. ಗುರುವಾರ ಬೆಳಗ್ಗೆ ನೇಪಾಳದ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರು ಸುಮಾರು 300 ಭಾರತೀಯರು ನಾಪತ್ತೆಯಾಗಿರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಸಂವಹನ ವ್ಯವಸ್ಥೆ ಹಾಗೂ ವಿದ್ಯುತ್ ಸಂಪರ್ಕ ಕಡಿತಗೊಂಡಿರುವುದು ಮತ್ತು ವಿವಿಧ ಸಂಸ್ಥೆಗಳು ಸಿದ್ಧಪಡಿಸಿರುವ ನಾಪತ್ತೆಯಾದವರ ಪಟ್ಟಿಗಳಲ್ಲಿನ ವ್ಯತ್ಯಾಸವೇ ಅಂಕಿಅಂಶಗಳಲ್ಲಿನ ಗೊಂದಲಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ನೇಪಾಳದಲ್ಲಿರುವ ಭಾರತದ ರಾಯಭಾರಿ ನವೀನ್ ಶ್ರೀವಾಸ್ತವ ಕೂಡ ಸಂಪರ್ಕ ವ್ಯವಸ್ಥೆ ಸ್ಥಗಿತಗೊಂಡಿರುವುದರಿಂದ ಅನೇಕ ಭಾರತೀಯರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ ಪಟ್ಟಿಯಲ್ಲಿ 'ನಾಪತ್ತೆ' ಎಂದು ದಾಖಲಾಗಿರುವ ಪ್ರತಿಯೊಬ್ಬರೂ ನಿಜವಾಗಿಯೂ ಕಾಣೆಯಾಗಿದ್ದಾರೆ ಎಂದು ಅರ್ಥೈಸಲು ಸಾಧ್ಯವಿಲ್ಲ. ಅವರ ನೈಜ ಸ್ಥಿತಿಗತಿ ಪತ್ತೆಹಚ್ಚುವ ಕಾರ್ಯ ಮುಂದುವರಿದಿದೆ.

ಕೈಲಾಸ ಮಾನಸ ಸರೋವರ ಯಾತ್ರಿಕರೂ ಸಂಕಷ್ಟದಲ್ಲಿ

ಪ್ರವಾಹದಿಂದಾಗಿ ಟಿಬೆಟ್‌ನ ಕೈಲಾಸ ಮಾನಸ ಸರೋವರ ಯಾತ್ರೆಯ ಮಾರ್ಗವೂ ತೀವ್ರವಾಗಿ ಹಾನಿಗೊಳಗಾಗಿದೆ. ನಾಪತ್ತೆಯಾದ ಭಾರತೀಯರಲ್ಲಿ ಕನಿಷ್ಠ 50 ಮಂದಿ ಕೈಲಾಸ ಮಾನಸ ಸರೋವರ ಯಾತ್ರೆಯಲ್ಲಿದ್ದವರು ಎಂದು ವರದಿಯಾಗಿದೆ.ಭಾರತೀಯ ಯಾತ್ರಿಕರು ಹಾಗೂ ಪ್ರವಾಸಿಗರ ಜತೆಗೆ ಅಮೆರಿಕ, ಆಸ್ಟ್ರೇಲಿಯಾ, ಬ್ರಿಟನ್, ಕೆನಡಾ, ಮಲೇಷ್ಯಾ, ನೆದರ್‌ಲ್ಯಾಂಡ್ಸ್ ಹಾಗೂ ದಕ್ಷಿಣ ಆಫ್ರಿಕಾ ಸೇರಿದಂತೆ ಹಲವು ದೇಶಗಳ ನಾಗರಿಕರೂ ಸಂಪರ್ಕಕ್ಕೆ ಸಿಗುತ್ತಿಲ್ಲ.

823 ಮಂದಿ ಸಂಪರ್ಕದಿಂದ ಹೊರಗೆ

ನೇಪಾಳದ ವಿಪತ್ತು ನಿರ್ವಹಣಾ ಸಂಸ್ಥೆಯ ಪ್ರಕಾರ, 823 ಮಂದಿ ಇನ್ನೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಇವರಲ್ಲಿ ನೇಪಾಳಿ ಹಾಗೂ ವಿದೇಶಿ ನಾಗರಿಕರು ಮತ್ತು ಪ್ರವಾಸಿಗರು ಸೇರಿದ್ದಾರೆ. ಒಂದು ಹಂತದಲ್ಲಿ 579 ಪ್ರವಾಸಿಗರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದರು. ರಕ್ಷಣಾ ತಂಡಗಳು ಪೀಡಿತ ಪ್ರದೇಶಗಳಲ್ಲಿ ಮನೆಗಳು, ವಾಹನಗಳು, ಸೇತುವೆಗಳು ಹಾಗೂ ನದಿಪಾತ್ರಗಳ ಬಳಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸುತ್ತಿವೆ. ನಾಪತ್ತೆಯಾದವರ ಪತ್ತೆ ಹಾಗೂ ಸಂತ್ರಸ್ತರ ರಕ್ಷಣೆಗೆ ಕಾರ್ಯಾಚರಣೆ ಮತ್ತಷ್ಟು ತೀವ್ರಗೊಳಿಸಲಾಗಿದೆ.

## ಸಹಾಯಕ ನಿರ್ದೇಶಕರಿಂದ ಸಿಸಿಟಿ ಕಾಮಗಾರಿ ಪರಿಶೀಲನೆ ಕೂಲಿ ಕಾರ್ಮಿಕರಿಗೆ ಬಾಳೆಹಣ್ಣು ವಿತರಣೆ

ವಿಜಯ ದುಂಬಿ ಸುದ್ದಿ....

**ಔರಾದ್: ತಾಲೂಕಿನ ಜಂಬಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಾರಾಜವಾಡಿ ಗ್ರಾಮದಲ್ಲಿ ವಿಬಿ?ಜಿ ರಾಮ್ ಜಿ ಯೋಜನೆಯಡಿ ನಡೆಯುತ್ತಿರುವ ಸಿಸಿಟಿ (ಕಾಂಟೂರ್ ಟ್ರೆಂಚ್) ಕಾಮಗಾರಿಯನ್ನು ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ (ಗ್ರಾ.ಉ) ಶಿವಕುಮಾರ ಘಾಟೆ ಅವರು ಭೇಟಿ ನೀಡಿ ಪರಿಶೀಲಿಸಿದರು.**

ಈ ವೇಳೆ ಕಾಮಗಾರಿಯ ಪ್ರಗತಿ, ಕೂಲಿ



ಕಾರ್ಮಿಕರ ಹಾಜರಾತಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರು ಉದ್ಯೋಗಕ್ಕಾಗಿ ಗುಳೆ ಹೋಗುವುದನ್ನು ತಡೆಗಟ್ಟುವ ಹಾಗೂ ಸ್ಥಳೀಯವಾಗಿಯೇ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ವಿಬಿ?ಜಿ ರಾಮ್ ಜಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು. ಕೂಲಿ ಕಾರ್ಮಿಕರೊಂದಿಗೆ ಸಂವಾದ ನಡೆಸಿದ ಅವರು, ಯೋಜನೆಯಡಿ ದೊರೆಯುವ ಕೆಲಸವನ್ನು ಸದ್ಬಳಕೆ ಮಾಡಿಕೊಂಡು ಗ್ರಾಮದಲ್ಲಿಯೇ ಕೆಲಸ ಮಾಡುವಂತೆ ತಿಳಿಸಿದರು. ಕೂಲಿ ಕಾರ್ಮಿಕರಿಗೆ ಬಾಳೆಹಣ್ಣು ವಿತರಣೆ: ಇದೇ ವೇಳೆ ವಿಬಿ–ಜಿ ರಾಮ್ ಜಿ ಯೋಜನೆಯಡಿ ನಡೆಯುತ್ತಿರುವ ಸಿಸಿಟಿ ಕಾಮಗಾರಿ ಸ್ಥಳದಲ್ಲಿದ್ದ ಕೂಲಿ ಕಾರ್ಮಿಕರಿಗೆ ಬಾಳೆಹಣ್ಣು ವಿತರಿಸಿದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ದಿನೇಶ್ ರೆಡ್ಡಿ, ಡಿಇಒ ಶಿವಕುಮಾರ ಪಾರಾ, ಎನ್‌ಆರ್ ಎಮ್–ಎಲ್‌ಎಂ ಸಿಬ್ಬಂದಿಯವರು, ಐಇಸಿ ಸಂಯೋಜಕ ಅಂಬಾದಾಸ ಪಾಟೀಲ್, ಶಿವಕುಮಾರ್ ಸಾದುರೆ, ಗ್ರಾಪಂ ಸಿಬ್ಬಂದಿ ಹಾಗೂ ಕೂಲಿಕಾರ್ಮಿಕರು ಹಾಜರಿದ್ದರು.

# ದೇವಲಗಾಣಗಾಪುರದಲ್ಲಿ ಅಕ್ರಮ ಅಂಗಡಿ ಮುಂಗಟ್ಟುಗಳ ತೆರವು

ವಿಜಯ ದುಂಬಿ ಸುದ್ದಿ....

**ಅಫಜಲಪುರ: ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ದೇವಲಗಾಣಗಾಪುರದ ದತ್ತಾತ್ರೇಯ ದೇವಸ್ಥಾನದ ಎದುರು ಗ್ರಾಮ ಪಂಚಾಯಿತಿ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡು ವ್ಯಾಪಾರ ನಡೆಸುತ್ತಿದ್ದ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸುವ ಕಾರ್ಯಕ್ಕೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ಮುಂದಾದರು.**

ದೇವಸ್ಥಾನದ ಎದುರಿನ ಸಾರ್ವಜನಿಕ ಹಾಗೂ ಗ್ರಾಮ ಪಂಚಾಯಿತಿ ಜಾಗವನ್ನು ಅತಿಕ್ರಮಿಸಿಕೊಂಡು ತೆಂಗಿನಕಾಯಿ ಸೇರಿದಂತೆ ವಿವಿಧ ವಸ್ತುಗಳ ಮಾರಾಟ ಮಾಡುತ್ತಿದ್ದ ವ್ಯಾಪಾರಿಗಳಿಗೆ ಈ ಹಿಂದೆಯೂ ಹಲವು ಬಾರಿ ತೆರವುಗೊಳಿಸುವಂತೆ ಸೂಚಿಸಲಾಗಿತ್ತು. ಸುಮಾರು ಒಂದು ವರ್ಷಕ್ಕೂ ಹಿಂದೆಯೇ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಲಾಗಿತ್ತು. ಆದರೆ, ಆದೇಶಗಳನ್ನು ಮೀರಿ ಅದೇ ಸ್ಥಳದಲ್ಲಿ ಮತ್ತೆ ಅಂಗಡಿ ಮುಂಗಟ್ಟುಗಳನ್ನು ಸ್ಥಾಪಿಸಿ ವ್ಯಾಪಾರ ಮುಂದುವರಿಸಲಾಗಿತ್ತು. ಈ ಕುರಿತು ಗ್ರಾಮ ಪಂಚಾಯಿತಿ ಅಭಿವೃದ್ಧಿ







ಅಧಿಕಾರಿ ಅನಸೂಯಾ ಅಷ್ಟಗಿ ಅವರು ಹಲವು ಬಾರಿ ವ್ಯಾಪಾರಿಗಳಿಗೆ ಮನವರಿಕೆ ಮಾಡಿದ್ದರು. ಆದರೂ ವ್ಯಾಪಾರ ಮುಂದುವರಿದ ಹಿನ್ನೆಲೆಯಲ್ಲಿ, ಇತ್ತೀಚೆಗೆ ಸಂಬಂಧಿಸಿದ ಅಧಿಕಾರಿಗಳಾದ ಶಿಖರ್ ಮೋಗಾ ಖಂಖ ಆದೇಶದ ಮೇರೆಗೆ ದೇವಲಗಾಣಗಾಪುರ ಗ್ರಾಮ ಪಂಚಾಯಿತಿ ವತಿಯಿಂದ ಬುಧವಾರ ಸಂಜೆ ಸುಮಾರು 4 ಗಂಟೆಗೆ ತೆರವು ಕಾರ್ಯಾಚರಣೆಗೆ ಮುಂದಾಯಿತು.

ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತೆರವು ಕಾರ್ಯ ಆರಂಭಿಸಲು ಮುಂದಾದ ತಕ್ಷಣ ವ್ಯಾಪಾರಿಗಳು ಸ್ವಯಂಪ್ರೇರಿತರಾಗಿ ತಮ್ಮ ಅಂಗಡಿ ಮುಂಗಟ್ಟುಗಳಲ್ಲಿದ್ದ ವಸ್ತುಗಳನ್ನು ತೆರವುಗೊಳಿಸಿ ಸ್ಥಳವನ್ನು ಖಾಲಿ ಮಾಡಲು ಮುಂದಾದರು. ದೇವಸ್ಥಾನದ ಮುಂಭಾಗದ ಪ್ರದೇಶದಲ್ಲಿ ಅಂಗಡಿ ಮುಂಗಟ್ಟುಗಳಿಂದಾಗಿ ಭಕ್ತರ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ವಿಶೇಷವಾಗಿ ಹುಣ್ಣಿಮೆ, ಜಾತ್ರೆ ಹಾಗೂ ಪ್ರಮುಖ ಧಾರ್ಮಿಕ ಕಾರ್ಯಕ್ರಮಗಳ ಸಂದರ್ಭದಲ್ಲಿ ದೇಶದ ವಿವಿಧ ರಾಜ್ಯಗಳಿಂದ ಸಾವಿರಾರು ಭಕ್ತರು ಆಗಮಿಸುವುದರಿಂದ ಸ್ಥಳಾವಕಾಶದ ಕೊರತೆ ಮತ್ತು ಸಂಚಾರದ ಅಡಚಣೆ ಉಂಟಾಗುತ್ತಿತ್ತು. ಭಕ್ತರ ಅನುಕೂಲ ಹಾಗೂ ದೇವಸ್ಥಾನದ ಮುಂಭಾಗದ ಸಾರ್ವಜನಿಕ ಸ್ಥಳವನ್ನು ಸುಗಮವಾಗಿ ಬಳಸುವ ಉದ್ದೇಶದಿಂದ ಗ್ರಾಮ ಪಂಚಾಯಿತಿ ಕೈಗೊಂಡಿರುವ ಕ್ರಮಕ್ಕೆ ಸ್ಥಳೀಯ ಸಾರ್ವಜನಿಕರು ಮತ್ತು ಭಕ್ತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ಭಕ್ತರ ಹಿತದೃಷ್ಟಿಯಿಂದ ಕೈಗೊಂಡಿರುವ ಈ ತೆರವು ಕಾರ್ಯವನ್ನು ಮುಂದುವರಿಸಿ, ಸಾರ್ವಜನಿಕ ಸ್ಥಳಗಳ ಅತಿಕ್ರಮಣಕ್ಕೆ ಕಡಿವಾಣ ಹಾಕಬೇಕು. ಗ್ರಾಮ ಪಂಚಾಯಿತಿಯ ಈ ಕಾರ್ಯಕ್ಕೆ ನಮ್ಮ ಬೆಂಬಲವಿದೆ" ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಗ್ರಾಮ ಪಂಚಾಯತ್ ಅಧಿಕಾರಿ ಅನೂಸಯ. ಅಷ್ಟಗಿ. ದತ್ತಾತ್ರೇಯ ದೇವಸ್ಥಾನದ ಕಾರ್ಯನಿರ್ವಹಕ ಅಧಿಕಾರಿ ಶ್ರೀಕಾಂತಮ್ಮ ಪೊಲೀಸ್ ಠಾಣೆಯ. ಪಿ ಎಸ್ ಆಯ. ಸಂಗೀತಾ. ಶಿಂಧೆ. ಹಾಗೂ ಪೊಲೀಸ್ ಸಿಬ್ಬಂದಿ ಗ್ರಾಮ ಪಂಚಾಯಿತಿ ಸಿಬ್ಬಂದಿ ದೇವಸ್ಥಾನ ಸಿಬ್ಬಂದಿ ಉಪಸ್ಥಿರಿದ್ದರು

## ಜೀವಾವಧಿ ಶಿಕ್ಷೆಗೆ ಗುರಿಯಾಗಿ ಪೆರೋಲ್ ಪಡೆದು ಪರಾರಿಯಾಗಿದ್ದ ಅಪರಾಧಿ 40 ವರ್ಷಗಳ ಬಳಿಕ ಅರೆಸ್ಟ್

ವಿಜಯ ದುಂಬಿ ಸುದ್ದಿ....

**ಹೈದರಾಬಾದ್: ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಪೆರೋಲ್ ಪಡೆದ ಬಳಿಕ, ಶಿಕ್ಷೆ ಆರಂಭವಾದ ಆರು ತಿಂಗಳಲ್ಲೇ ಜೈಲಿನಿಂದ ಪರಾರಿಯಾಗಿದ್ದ ಅಪರಾಧಿಯನ್ನು 40 ವರ್ಷಗಳ ಬಳಿಕ ತೆಲಂಗಾಣ ಪೊಲೀಸರು ಬಂಧಿಸಿ ಮತ್ತೆ ಜೈಲಿಗಟ್ಟಿದ್ದಾರೆ.ನಾಲ್ಕು ದಶಕಗಳ ಕಾಲ ತಲೆಮರೆಸಿಕೊಂಡಿದ್ದ ಅಪರಾಧಿ ಈ ಅವಧಿಯಲ್ಲಿ ಸರ್ಕಾರಿ ಶಿಕ್ಷಕನಾಗಿ ಕೆಲಸ ಗಿಟ್ಟಿಸಿಕೊಳ್ಳುವುದರ ಜತೆಗೆ ರಾಜ್ಯ ಪ್ರಶಸ್ತಿಯನ್ನೂ ಪಡೆದಿದ್ದ ಎಂಬುದು ಇದೀಗ ಬೆಳಕಿಗೆ ಬಂದಿದೆ.**

ಈಗ 70ರ ದಶಕದ ಅಂತ್ಯದಲ್ಲಿರುವ ಸಂದೇಲ ವೀರಣ್ಣನಿಗೆ 1970ರ ದಶಕದ ಉತ್ತರಾರ್ಧದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ 1983ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು. ಆದರೆ, ಪೆರೋಲ್ ಪಡೆದ ಬಳಿಕ ಶಿಕ್ಷೆ



ಆರಂಭವಾದ ಆರು ತಿಂಗಳಲ್ಲೇ ಜೈಲಿನಿಂದ ಪರಾರಿಯಾಗಿ ತಲೆಮರೆಸಿಕೊಂಡಿದ್ದ. 40 ವರ್ಷಗಳ ಕಾಲ ಪೊಲೀಸರಿಗೆ ಸಿಗದೆ ಇದ್ದ ವೀರಣ್ಣನನ್ನು ಮೇ 2024ರಲ್ಲಿ ಬಂಧಿಸಲಾಗಿತ್ತು.

ಮಹಬೂಬಾಬಾದ್‌ನಲ್ಲಿ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ತೆಲಂಗಾಣ ಕಾರಾಗೃಹ ಇಲಾಖೆಯ ವಿಶೇಷ ಕಾರ್ಯಪಡೆ ವೀರಣ್ಣನನ್ನು ಬಂಧಿಸಿತ್ತು. ಬಳಿಕ ಆತನನ್ನು ಚೆರ್ಲಪಲ್ಲಿ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ. ಪತ್ನಿಯ ಅರ್ಜಿ ವಜಾ

ವೀರಣ್ಣನ ಪತ್ನಿ ಸಂದೇಲ ಚರಮ ಅವರು ಆತನ ಬಂಧನವನ್ನು ಪ್ರಶ್ನಿಸಿ, ವೈದ್ಯಕೀಯ ಹಾಗೂ ಅನುಕಂಪದ ಆಧಾರದ ಮೇಲೆ ಬಿಡುಗಡೆ ಮಾಡುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಟಿ. ಮಾಧವಿ ದೇವಿ ಅವರು ವೀರಣ್ಣನ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಅರ್ಜಿಯನ್ನು ವಜಾಗೊಳಿಸಿದ್ದಾರೆ. ಅಲ್ಲದೆ, ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವೀರಣ್ಣನನ್ನು ಮತ್ತೆ ಜೈಲಿಗೆ ಕಳುಹಿಸುವಂತೆ ಆದೇಶಿಸಿದ್ದಾರೆ.

ಪೆರೋಲ್ ಉಲ್ಲಂಘನೆಗೆ ಸಂಬಂಧಿಸಿದಂತೆ ತನ್ನ ವಾದ ಮಂಡಿಸಲು ವೀರಣ್ಣನಿಗೆ ನ್ಯಾಯಯುತ ಅವಕಾಶ ನೀಡಲಾಗಿಲ್ಲ ಎಂಬ ಪ್ರತಿವಾದವನ್ನು ನ್ಯಾಯಾಲಯ ತಿರಸ್ಕರಿಸಿದೆ. ಜೈಲು ಅಧಿಕಾರಿಗಳು ಶೋಕಾಸ್ ನೋಟಿಸ್ ಜಾರಿ ಮಾಡಿ, ಇತ್ತೀಚಿನ ಪೆರೋಲ್ ಮನವಿಯನ್ನು ತಿರಸ್ಕರಿಸುವ ಮುನ್ನ ವಿಚಾರಣೆ ನಡೆಸಿದ್ದಾರೆ ಎಂಬುದು ನ್ಯಾಯಾಲಯದ ಗಮನಕ್ಕೆ ಬಂದಿದೆ. ಇದಲ್ಲದೆ, ವೀರಣ್ಣನಿಗೆ ವರದಿಯಾಗಿರುವ ಅನಾರೋಗ್ಯಗಳಿಗೆ ಅಗತ್ಯ ವೈದ್ಯಕೀಯ ಆರೈಕೆ ಒದಗಿಸಲು ಜೈಲು ವ್ಯವಸ್ಥೆ ಸಜ್ಜಾಗಿದೆ ಎಂದು ರಾಜ್ಯ ಸರ್ಕಾರದ ಕಾನೂನು ಪ್ರತಿನಿಧಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ವೈಯಕ್ತಿಕ ಪ್ರಕರಣಕ್ಕೆ ಸೀಮಿತವಾಗದೆ, 40 ವರ್ಷಗಳಿಗೂ ಹೆಚ್ಚು ಕಾಲ ಪರಾರಿಯಾಗಿದ್ದ ಅಪರಾಧಿಯನ್ನು ಪತ್ತೆಹಚ್ಚಲು ವಿಫಲವಾದ ಜೈಲು ಆಡಳಿತದ ವಿರುದ್ಧ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಪರಾಧಿಯೊಬ್ಬ ದಶಕಗಳ ಕಾಲ ಕಾನೂನಿನ ಕಣ್ತಪ್ಪಿಸಿ ಬದುಕಲು ಸಾಧ್ಯವಾಗಿರುವುದು ಗಮನಾರ್ಹ ಆಡಳಿತಾತ್ಮಕ ವೈಫಲ್ಯ ಎಂದು ನ್ಯಾಯಮೂರ್ತಿ ಮಾಧವಿ ದೇವಿ ಅಭಿಪ್ರಾಯಪಟ್ಟಿದ್ದಾರೆ.

# ಬೆಂಗಳೂರಲ್ಲಿ ಮಿತಿಮೀರುತ್ತಿದೆ ಡ್ರಗ್ಸ್ ಹಾವಳಿ, ನಶೆಯಲ್ಲಿ ತೇಲುತ್ತಿರುವ ಯುವಜನಾಂಗ

ವಿಜಯ ದುಂಬಿ ಸುದ್ದಿ....

**ಬೆಂಗಳೂರು ನಗರದಲ್ಲಿ ಮಕ್ಕಳಿಗೆ ಉತ್ತಮ ಹಾಲು ಸಿಗುತ್ತಿದೆಯೋ ಗೊತ್ತಿಲ್ಲ; ಆದರೆ ಆಲ್ಕೊಹಾಲ್ ಹಾಗೂ ಡ್ರಗ್ಸ್ ಸರಳವಾಗಿ, ಹೇರಳವಾಗಿ ಸಿಗುತ್ತವೆ. ರಾಜಧಾನಿ ಬೆಂಗಳೂರಿನ ಬೀದಿ, ಗಲ್ಲಿಗಳಲ್ಲಿ ನಾಯಿಕೊಡೆಗಳಂತೆ ವೈನ್ ಸ್ಟೋರ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು ತಲೆ ಎತ್ತಿ ನಿಂತಿವೆ. ನಾವು ಮುಂಜಾನೆ ಎದ್ದು ಚಹಾ ಕುಡಿದಂತೆ ಮದ್ಯಪ್ರಿಯರು ಸೂರ್ಯೋದಯಕ್ಕೂ ಮೊದಲೇ ನಶೆ ಏರಿಸಿಕೊಳ್ಳುತ್ತಾರೆ. ಈ ನಶೆಗಿಂತ ಅತ್ಯಂತ ಗಂಭೀರವಾದ ನಶೆ ಎಂದರೆ ಡ್ರಗ್ಸ್ ಸೇವನೆ. ಇದು ಇಂದಿನ ಯುವಜನರಲ್ಲಿ ಒಂದು ಫ್ಯಾಷನ್ ಆಗಿ ಹೋಗಿದೆ.**

ಬೆಂಗಳೂರು ನಗರದಲ್ಲಿ ಈ ವರ್ಷದ ಏಳು ತಿಂಗಳಲ್ಲಿ 43 ವಿದೇಶಿಯರು ಸೇರಿದಂತೆ 4,267 ಮಂದಿ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಿ, ಒಟ್ಟು 238.46 ಕೋಟಿ ರೂ. ಮೌಲ್ಯದ 1,623 ಕೆಜಿ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದರಲ್ಲಿ 9 ಕೋಟಿ ರೂ. ಮೌಲ್ಯದ 1,408 ಕೆಜಿ ಗಾಂಜಾ ಹಾಗೂ 229 ಕೋಟಿ ರೂ. ಮೌಲ್ಯದ 215 ಕೆಜಿ ಸಿಂಥೆಟಿಕ್ ಮಾದಕವಸ್ತುಗಳು ಸೇರಿವೆ. ಸಿಸಿಬಿ ಪೊಲೀಸರು ದಾಖಲೆ ಪ್ರಮಾಣದಲ್ಲಿ ಮಾದಕವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಬೆಂಗಳೂರು ನಗರ ಪೊಲೀಸರು ಕಳೆದ ಏಳು ತಿಂಗಳಲ್ಲಿ ವಶಪಡಿಸಿಕೊಂಡಿರುವ ಡ್ರಗ್ಸ್ ಪ್ರಮಾಣ ನೋಡಿದರೆ ಎದೆ ಝಲ್ಲೆನಿಸುತ್ತದೆ, ಭಯ ಹುಟ್ಟಿಸುತ್ತದೆ.ಬೆಂಗಳೂರು ನಗರದ ನೂತನ ಪೊಲೀಸ್ ಆಯುಕ್ತರಾಗಿ ಸೀಮಂತ್ ಕುಮಾರ್ ಅವರು ಕಳೆದ ವರ್ಷದ ಜೂನ್ 5ರಂದು ಅಧಿಕಾರ ವಹಿಸಿಕೊಂಡರು. ಅವರ ಮಾರ್ಗದರ್ಶನದಲ್ಲಿ ಬೆಂಗಳೂರು ನಗರ ಪೊಲೀಸರು ಕಳೆದ 13 ತಿಂಗಳಲ್ಲಿ 450 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಮಾದಕವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಇದುವರೆಗೆ ಪೊಲೀಸರಿಗೆ ಸಿಕ್ಕಿದ್ದು ಇಷ್ಟು ಮಾತ್ರ. ಸಿಗದೇ ಇರುವ ಡ್ರಗ್ಸ್ ಇನ್ನೆಷ್ಟೋ? ನೀವೇ ಊಹಿಸಿಕೊಳ್ಳಿ.ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಡ್ರಗ್ಸ್ ಮುಕ್ತ ರಾಜ್ಯ ಮಾಡಲು ಪಣ ತೊಟ್ಟಿದೆ. ಸರ್ಕಾರದ ಈ ಆದೇಶದಂತೆ ಪೊಲೀಸ್ ಇಲಾಖೆಯೂ ಯುದ್ಧೋಪಾದಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಅದರಲ್ಲೂ ಬೆಂಗಳೂರು ನಗರದ ಪೊಲೀಸರು ಹಗಲು–ರಾತ್ರಿ ಎನ್ನದೆ ಡ್ರಗ್ಸ್ ಪೆಡ್ಲರ್‌ಗಳಿಗಾಗಿ ಶೋಧ ನಡೆಸುತ್ತಾ ಅಪಾರ ಪ್ರಮಾಣದ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಮಾದಕವಸ್ತು ಮಾರಾಟಗಾರರು ವಿದ್ಯಾರ್ಥಿಗಳು ಹಾಗೂ ಯುವ ವೃತ್ತಿಪರರನ್ನು ಗುರಿಯಾಗಿಸಿಕೊಂಡು, ಒತ್ತಡ, ಸ್ನೇಹಿತರ ಪ್ರಭಾವ ಹಾಗೂ ಇತರ ದುರ್ಬಲತೆಗಳನ್ನು ಬಳಸಿಕೊಂಡು ವಹಿವಾಟು ನಡೆಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಸಮಾಜದ ಮಹಾಪಿಡುಗಾಗಿರುವ ಡ್ರಗ್ಸ್



ಅನ್ನು ನಿರ್ಮೂಲನೆ ಮಾಡಲು ಕರ್ನಾಟಕ ಸರ್ಕಾರ 'ಬೇಡ ಬ್ರೋ' ಮತ್ತು 'ರೈಸ್ (RISE)' ಉಪಕ್ರಮಗಳನ್ನು ಜಾರಿಗೆ ತಂದಿದೆ. ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ 'ಬೇಡ ಬ್ರೋ' ಮತ್ತು 'ರೈಸ್' ಉಪಕ್ರಮಗಳನ್ನು ಉದ್ಘಾಟಿಸಿ, ವಿದ್ಯಾರ್ಥಿಗಳು ಹಾಗೂ ಯುವಜನರ ಸಹಕಾರ ಕೋರಿದ್ದಾರೆ.

ಬೇಡ ಬ್ರೋ 'ಬೇಡ ಬ್ರೋ' ಅಭಿಯಾನವು ಯುವಜನರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಮೂಲಕ ಶಿಕ್ಷಣ ಮತ್ತು ಸಮುದಾಯದ ಸಹಭಾಗಿತ್ವದ ಮೂಲಕ ಮಾದಕವ್ಯಸನವನ್ನು ತಡೆಗಟ್ಟುವ ಉದ್ದೇಶದಿಂದ ರೂಪಿಸಲಾದ ವಿಶೇಷ ಜಾಗೃತಿ ಕಾರ್ಯಕ್ರಮವಾಗಿದೆ.ಸ್ನೇಹಿತರ ಒತ್ತಡಕ್ಕೆ ಮಣಿಯದೆ ದೃಢವಾಗಿ ನಿರಾಕರಿಸುವ ಮನೋಭಾವವನ್ನು ಬೆಳೆಸಲು ಈ ಅಭಿಯಾನ ಪ್ರೇರೇಪಿಸುತ್ತದೆ.

ಈ ಉಪಕ್ರಮದಲ್ಲಿ ಪೊಲೀಸ್, ಕಂದಾಯ, ಸಾರಿಗೆ, ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಆರೋಗ್ಯ ಹಾಗೂ ಔಷಧ ನಿಯಂತ್ರಣ ಇಲಾಖೆಗಳು ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸುವ ಬಹು–ಪಾಲುದಾರಿಕೆ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ನಿರಾಕರಿಸಿ ಮಾದಕವಸ್ತುಗಳಿಗೆ 'ನೋ' ಎಂದು ಹೇಳಿ ನಿರಾಕರಿಸಿ ಮತ್ತು ಎಲ್ಲಾ ಹಾನಿಕಾರಕ ವಸ್ತುಗಳಿಂದ ದೂರವಿರಿ. ನಿಮ್ಮ ಜೀವನ ಮತ್ತು ಭವಿಷ್ಯಕ್ಕಾಗಿ ಸರಿಯಾದ ಆಯ್ಕೆಯನ್ನು ಮಾಡಿಕೊಳ್ಳಿ.

ಮಾಹಿತಿ ನೀಡಿ ಮಾದಕವಸ್ತುಗಳಿಗೆ ಸಂಬಂಧಿಸಿದ ಅಥವಾ ಯಾವುದೇ ಅನುಮಾನಾಸ್ಪದ ಚಟುವಟಿಕೆಗಳ ಕುರಿತು ಪೊಲೀಸರಿಗೆ ಮಾಹಿತಿ ನೀಡಿ. ನಿಮ್ಮ ಒಂದು ಮಾಹಿತಿ ಹಲವಾರು ಜೀವಗಳನ್ನು ಉಳಿಸಬಹುದು. ಮಾಹಿತಿ ನೀಡುವವರ ಹೆಸರುಗಳನ್ನು ಗೌಪ್ಯವಾಗಿ ಇಡಲಾಗುತ್ತದೆ. ಯಾವುದೇ ಭಯ ಬೇಡ.

ಬೆಂಬಲಿಸಿ ನಿಮ್ಮ ಸ್ನೇಹಿತರು ಅಥವಾ ಅವರ ಕುಟುಂಬದವರು ಮಾದಕವಸ್ತುಗಳಿಂದ ದೂರವಿದ್ದು ಸಕಾರಾತ್ಮಕ ಜೀವನ ನಡೆಸುವಂತೆ ಪ್ರೋತ್ಸಾಹಿಸಿ. ಶೈಕ್ಷಣಿಕ ಸಂಸ್ಥೆಗಳು, ಪೋಷಕರು ಹಾಗೂ ಸ್ಥಳೀಯ ಸಮುದಾಯಗಳು ಪರಸ್ಪರ ಸಹಕಾರದೊಂದಿಗೆ ಈ ವ್ಯಸನ ತಡೆಯುವಲ್ಲಿ ಪೂರಕವಾದ ಸುರಕ್ಷತೆ ಮತ್ತು ಬೆಂಬಲವನ್ನು ನೀಡಬೇಕಾಗಿದೆ.

ಸಬಲೀಕರಣ ಜ್ಞಾನ, ಜಾಗೃತಿ ಮತ್ತು ಕೌಶಲ್ಯಗಳ ಮೂಲಕ ಇತರರನ್ನು ಹಾಗೂ ಯುವಜನರನ್ನು ಮಾದಕವ್ಯಸನದ ವಿರೋಧಿ ರಾಯಭಾರಿಗಳನ್ನಾಗಿ ಸಬಲೀಕರಿಸಿ.ಮಾದಕವಸ್ತು ವ್ಯಸನ ಕೇವಲ ಕಾನೂನು ಜಾರಿಗೆ ಸಂಬಂಧಿಸಿದ ಸಮಸ್ಯೆಯಲ್ಲ; ಇದು ಸಾಮಾಜಿಕ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಸವಾಲಾಗಿದೆ.

ಈ ಮಹಾಪಿಡುಗಿನ ಜಾಲವನ್ನು ಬೇರುಸಹಿತ ಕಿತ್ತೆಸೆಯಲು ಪ್ರತಿಯೊಬ್ಬ ನಾಗರಿಕನ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಾದಕವಸ್ತುಗಳ ಸಾಗಾಟ, ಮಾರಾಟ ಮತ್ತು ಸೇವನೆ ಕಂಡುಬಂದರೆ ತಕ್ಷಣ 1922 ಅಥವಾ 112 ಸಹಾಯವಾಣಿಗೆ ಕರೆ ಮಾಡಿ ಅಥವಾ ಕೆಎಸ್‌ಪಿ ಆ?ಯಪ್ ಮೂಲಕ ಮಾಹಿತಿ ನೀಡಿ. ನಮ್ಮ ಯುವಜನಾಂಗದ ರಕ್ಷಣೆಗಾಗಿ ಪೋಷಕರು, ಶಿಕ್ಷಣ ಸಂಸ್ಥೆಗಳು, ಉದ್ಯೋಗದಾತರು ಮಾತ್ರವಲ್ಲದೆ ನಾಗರಿಕ ಸಮಾಜದ ಎಲ್ಲರೂ ಒಟ್ಟಾಗಿ ಶ್ರಮಿಸಬೇಕು. ಇಲ್ಲದಿದ್ದರೆ ಈ ಮಾದಕವಸ್ತುಗಳ ಮಹಾಪಿಡುಗಿನಿಂದ ನಮ್ಮ ಯುವಕರು ಸರ್ವನಾಶವಾಗಲಿದ್ದಾರೆ. ಎಚ್ಚರ! ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಅವರನ್ನು ರಕ್ಷಿಸಿ, ಬಲಿಷ್ಠ ಮತ್ತು ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಿ.

## ಸ್ತನ್ಯಪಾನ ಸಪ್ತಾಹದ ಅಂಗವಾಗಿ ಜಾಗೃತಿ ಕಾರ್ಯಕ್ರಮ

**ವಿಜಯ ದುಂಬಿ ಸುದ್ದಿ....**

**ಕುಷ್ಟಗಿ: ಇನ್ನರ್ ವೀಲ್ ಕ್ಲಬ್ ಕುಷ್ಟಗಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಮಾರುತಿನಗರದ ಅಂಗನವಾಡಿ ಕೇಂದ್ರದಲ್ಲಿ ಸ್ತನ್ಯಪಾನ ಸಪ್ತಾಹದ ಅಂಗವಾಗಿ ಗರ್ಭಿಣಿ ಹಾಗೂ ಪ್ರಸೂತಿ ಮಹಿಳೆಯರಿಗೆ ಸ್ತನ್ಯಪಾನದ ಮಹತ್ವ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.**




ಕಾರ್ಯಕ್ರಮದಲ್ಲಿ ಇನ್ನರ್ ವೀಲ್ ಜಿಲ್ಲಾ ಕಾರ್ಯದರ್ಶಿ ಡಾ. ಪಾರ್ವತಿ ಪೋಳೋಟಿ ಮಾತನಾಡಿ, ತಾಯಿಯ ಹಾಲಿನಲ್ಲಿರುವ ಪೌಷ್ಟಿಕಾಂಶ, ಉತ್ತಮ ಸ್ತನ್ಯಪಾನಕ್ಕೆ ಅಗತ್ಯವಾದ ಅಂಶಗಳು ಹಾಗೂ ಬಾಣಂತಿಯರು ಸೇವಿಸಬೇಕಾದ ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಿದರು. ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಪ್ರೋಟೀನ್ ಹಾಗೂ ಕಬ್ಬಿಣಾಂಶಯುಕ್ತ ಆಹಾರದ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಲ್ಲಮ್ಮ ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯವೈಖರಿ ಹಾಗೂ ವಿವಿಧ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಇನ್ನರ್ ವೀಲ್ ಕ್ಲಬ್ ಕುಷ್ಟಗಿ ಅಧ್ಯಕ್ಷೆ ಗೌರಮ್ಮ ಕೂಡತನಿ ಮಾತನಾಡಿ, "ಕಳೆದ ಒಂಬತ್ತು ವರ್ಷಗಳಿಂದ ಕ್ಲಬ್ ವತಿಯಿಂದ ಸ್ತನ್ಯಪಾನ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದು, ತಾಯಿ ಮತ್ತು ಮಗುವಿನ ಆರೋಗ್ಯದ ಕುರಿತು ಅರಿವು ಮೂಡಿಸುವ ಸೇವಾ ಕಾರ್ಯದಲ್ಲಿ ತೊಡಗಿರುವುದು ಹೆಮ್ಮೆಯ ಸಂಗತಿ" ಎಂದರು. ಶಾರದಾ ಶೆಟ್ಟರ್ ಮಾತನಾಡಿ, ಪ್ರತಿಯೊಬ್ಬ ತಾಯಿಯೂ ಸ್ತನ್ಯಪಾನದ ಮಹತ್ವ ಅರಿತುಕೊಂಡು ಇಂತಹ ಜಾಗೃತಿ ಕಾರ್ಯಕ್ರಮಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕ್ಲಬ್ ಕಾರ್ಯದರ್ಶಿ ಶ್ರೀದೇವಿ ಮಸ್ಕೀಟಾಯಿಟೆ ಸೇರಿದಂತೆ ಕ್ಲಬ್ ಸದಸ್ಯರು ಹಾಗೂ ಅಂಗನವಾಡಿ ಸಿಬ್ಬಂದಿ ಉಪಸ್ಥಿತರಿದ್ದರು. ಗರ್ಭಿಣಿ ಹಾಗೂ ಪ್ರಸೂತಿ ಮಹಿಳೆಯರಿಗೆ ಪ್ರೋಟೀನ್ ಲ್ಯಾಕ್ಟೇಶನ್ ಪೌಡರ್ ಮತ್ತು ಕಬ್ಬಿಣದ ಟಾನಿಕ್‌ಗಳನ್ನು ವಿತರಿಸಲಾಯಿತು. "ಉತ್ತಮ ಸ್ತನ್ಯಪಾನ?ಆರೋಗ್ಯಕರ ತಾಯಿ, ಆರೋಗ್ಯಕರ ಮಗು" ಎಂಬ ಸಂದೇಶದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

ವಿಜಯ ದುಂಬಿ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಬಾಲಾ ಬ್ಯಾಡ್ಮಿಂಟನ್: ವಿದ್ಯಾರ್ಥಿನಿಯರು ಸತತ ನಾಲ್ಕನೇ ಬಾರಿ ವಿಭಾಗ ಮಟ್ಟಕ್ಕೆ ಆಯ್ಕೆ,ಅಭಿನಂದನೆ

**ವಿಜಯ ದುಂಬಿ ಸುದ್ದಿ....**

**ಹಾಲಾಪೂರ: ಗ್ರಾಮದಲ್ಲಿರುವ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಸತತವಾಗಿ ನಾಲ್ಕನೇ ಬಾರಿಗೆ ವಿದ್ಯಾರ್ಥಿನಿಯರು ಬಾಲ್ ಬ್ಯಾಡ್ಮಿಂಟನ್ ಆಟದಲ್ಲಿ ಗೆದ್ದು ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ,ಗ್ರಾಮೀಣ**



**ಪ್ರದೇಶದಲ್ಲಿ ಇರುವಂತಹ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಆಟ ಆಡಿದ ಪ್ರಯುಕ್ತ ನಮ್ಮ ಹಾಲಾಪೂರ ಶಾಲೆಯು ಇಂದು ಜಿಲ್ಲೆಯಲ್ಲಿ ಹೆಸರನ್ನು ಪಡೆದಿದ್ದು ಕೀರ್ತಿಗೆ ಪಾತ್ರವಾಗಿದ್ದು ಹೆಮ್ಮೆಯ ವಿಚಾರ ಎಂದು ದೈಹಿಕ ಶಿಕ್ಷಕರಾದ ರವೀಂದ್ರ ಕುಂಬಾರ ಬಹಳಷ್ಟು ಹರ್ಷ ವ್ಯಕ್ತಪಡಿಸಿದರು. ಕ್ರೀಡೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಾದ ಸೋಫಿಯಾ,ಅಮೃತ, ಪ್ರಿಯಾಂಕ,ರೇಣುಕಾ, ಶಿವಾನಿ ಈ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಜೊತೆಯಾಟದಿಂದ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿದ್ದು ಸಂತೋಷ ಎಂದು ತಿಳಿಸಿದರು.ಈ ವಿದ್ಯಾರ್ಥಿಗಳ ಸಾಧನೆಗೆ ಎಸ್ ಡಿ ಎಮ್ ಸಿ ಅದ್ಯಕ್ಷರು, ಸರ್ವಸದಸ್ಯರು ಹಾಗೂ ಸುಭಾಷ್ ಸಿಂಗ್ ಮುಖ್ಯ ಶಿಕ್ಷಕರು, ಶಿಕ್ಷಕವೃಂದ,ಹಳೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳು, ಊರಿನ ಶಿಕ್ಷಣ ಪ್ರೇಮಿಗಳು,ಕ್ರೀಡಾಭಿಮಾನಿಗಳು ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.**

# ಪ್ರಿಯಾಂಕ್ ಖರ್ಗೆಯವರಿಗೆ ಗೃಹ ಸಚಿವರಾಗಲು ಯೋಗ್ಯತೆ ಇಲ್ಲ : ಚಲುವಾದಿ ನಾರಾಯಣಸ್ವಾಮಿ

**ವಿಜಯ ದುಂಬಿ ಸುದ್ದಿ....**

**ಲಿಂಗಸಗೂರು: ಪ್ರಸುತ್ತ ರಾಜ್ಯದಲ್ಲಿರುವ ಗೃಹಸಚಿವರಾದ ಪ್ರಿಯಾಂಕ್ ಖರ್ಗೆ ಗೃಹ ಸಚಿವರಾಗಲು ಅವರಲ್ಲಿ ಯೋಗ್ಯತೆ ಇಲ್ಲ ಅವರನ್ನು ಆರ್‌ಎಸ್‌ಎಸ್ ನ ಮಂತ್ರಿಯನ್ನಾಗಿ ಮಾಡಿ, ಎಂದು ವಿರೋಧ ಪಕ್ಷದ ವಿಪಕ್ಷ ನಾಯಕ ಚಲುವಾದಿ ನಾರಾಯಣಸ್ವಾಮಿ ಹೇಳಿದರು.**

ಅವರಿಂದು ಕರಡಕಲ್ ಗ್ರಾಮದ ರಾಣೆಮ್ಮ ಕುಟುಂಬದವರ ಮನೆಗೆ ಬೇಟಿ ಸಾಂತ್ವನ ಹೇಳಿದ ನಂತರ ಮಾತನಾಡಿದ ಅವರು, ರಾಜ್ಯದಲ್ಲಿ ದಲಿತರ ಸರಣಿ ಕೊಲೆಗಳಾಗುತ್ತಿದ್ದರು ಯಾವುದೇ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದಾರೆ. ಅಲ್ಲದೇ ಜಿಲ್ಲೆ ಮತ್ತು ರಾಜ್ಯದಲ್ಲಿ ಡ್ರಗ್ಸ್ ಹಾಗೂ ಗಾಂಜಾಕ್ಕೆ ಯುವಕರು ಬಲಿಯಾಗುತ್ತಿದ್ದಾರೆ. ಕುಟುಂಬಗಳ ನಾಶವಾಗುತ್ತಿವೆ. ಇದನ್ನು ನಿಭಾಯಿಸುವಲ್ಲಿ ಗೃಹ ಸಚಿವರು ವಿಫಲರಾಗಿದ್ದಾರೆ. ಆದ್ದರಿಂದ



ಮುಖ್ಯ ಮಂತ್ರಿಗಳು ಒಳ್ಳೆಯವರನ್ನು ಗೃಹ ಸಚಿವರನ್ನಾಗಿ ಮಾಡಲಿ ಎಂದರು.ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆಯಲ್ಲಿ ಕಳೆದ 15 ದಿನಗಳಲ್ಲಿ ಒಬ್ಬ ದಲಿತ ಯುವಕನ ಕೊಲೆ ಹಾಗೂ ಇಬ್ಬರು ಮಹಿಳೆಯರ ಅತ್ಯಾಚಾರ ಕೊಲೆಯಾಗಿರುವುದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗಿತ್ತು.

ಆದರೆ 2 ದಿನಗಳ ಮುಂಚೆಯೇ ಸದನವನ್ನು ಮೊಟಕುಗೊಳಿಸಿ ಕಾಂಗ್ರೆಸ್ ನಾಯಕರು ಕಾಣದಂತೆ ಮಾಯವಾಗಿದ್ದಾರೆ. ಇದರಿಂದಾಗಿ ಸದನದಲ್ಲಿ ಈ ವಿಷಯ ಚರ್ಚಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಆ ಕುಟುಂಬಗಳಿಗೆ ಸಾಂತ್ವಾನ ಹೇಳಲು ಇಂದು ಕರಡಕಲ್ ಗ್ರಾಮದ ರಾಣೆಮ್ಮನ ಮನೆಗೆ ಭೇಟಿ ನೀಡಿ ಅವರ ಕುಟುಂಬಕ್ಕೆ ಸಾಂತ್ವಾನ ಹೇಳಲಾಯಿತು. ಸರ್ಕಾರದಿಂದ ಕೂಡಲೇ ಈ ಕುಟುಂಬಕ್ಕೆ 2 ಎಕರೆ ಜಮೀನು, ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಬೇಕೆಂದು ಸರ್ಕಾರದ ಮೇಲೆ ಒತ್ತಡ ಹಾಕುತ್ತೇನೆ.ದಲಿತರ ಕಗ್ಗೊಲೆಗಳು ನಡೆಯುತ್ತಿದ್ದರೂ ಸರ್ಕಾರದ ಯಾವೊಬ್ಬ ಮಂತ್ರಿಯಾಗಲಿ ಸರ್ಕಾರವಾಗಲಿ ಅನ್ಯಾಯವಾದ ಕುಟುಂಬಗಳಿಗೆ ಭೇಟಿ ನೀಡುವ ಸೌಜನ್ಯತೆ ಸರ್ಕಾರಕ್ಕಿಲ್ಲವಾಗಿದೆ.

ಇನ್ನು ಉಪ ವಿಭಾಗದ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಪೋಸ್ಟ್‌ಮನ್ ಕೆಲಸ ಮಾಡುತ್ತಿದ್ದಾರೆ. ವಸ್ತುಸ್ಥಿತಿಯ ಬಗ್ಗೆ ವರದಿಯನ್ನು ತಯಾರಿಸಲು ಅವರಿಂದ ಸಾಧ್ಯವಾಗಿಲ್ಲ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಜಿಲ್ಲಾ ಕಾರ್ಯದರ್ಶಿ ರವೀಂದ್ರ ಜಲ್ದಾರ್,

# ದಲಿತರ ಹತ್ಯಾಚಾರ ತಡೆಯಲು ಕಠಿಣ ಕ್ರಮಕ್ಕೆ ಸಿಪಿಐ(ಎಂಎಲ್) ರೆಡ್‌ಸ್ಟಾರ್ ಆಗ್ರಹ

**ವಿಜಯ ದುಂಬಿ ಸುದ್ದಿ....**

**ಲಿಂಗಸಗೂರು: ರಾಯಚೂರು ಜಿಲ್ಲೆಯಲ್ಲಿ ದಲಿತರು ಹಾಗೂ ದಲಿತ ಮಹಿಳೆಯರ ಮೇಲೆ ನಡೆಯುತ್ತಿರುವ ಕೊಲೆ, ಅತ್ಯಾಚಾರ ಮತ್ತು ದೌರ್ಜನ್ಯ ಪ್ರಕರಣಗಳನ್ನು ತಡೆಯಲು ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಸಿಪಿಐ(ಎಂಎಲ್) ರೆಡ್‌ಸ್ಟಾರ್ ತಾಲೂಕ ಕಾರ್ಯದರ್ಶಿ ತಿಪ್ಪರಾಜು ಸಹಾಯಕ ಆಯುಕ್ತರ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.**

ಜಿಲ್ಲೆಯಲ್ಲಿ ನಡೆದಿರುವ ಭೂಮಾನಂದ, ಸಿರವಾರ ತಾಲೂಕಿನ ವಕ್ರಾಣಿ ಗ್ರಾಮದ ಅಶ್ವಿನಿ ಹಾಗೂ ಲಿಂಗಸಗೂರು ತಾಲೂಕಿನ ಕರಡಕಲ್ ಗ್ರಾಮದ ರಾಣೆಮ್ಮ ಕೊಲೆಅತ್ಯಾಚಾರ ಪ್ರಕರಣಗಳ ಎಲ್ಲ ಆರೋಪಿಗಳನ್ನು ಬಂಧಿಸಿ, ನಿಷ್ಪಕ್ಷಪಾತ ಹಾಗೂ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಲಾಯಿತು.

ಈ ಮೂರು ಸಂತ್ರಸ್ತ ಕುಟುಂಬಗಳ ಪರಿಸ್ಥಿತಿಯನ್ನು ಪರಿಗಣಿಸಿ ರಾಜ್ಯ ಸರ್ಕಾರ ತಲಾ 1 ಕೋಟಿ ಪರಿಹಾರ ನೀಡಬೇಕು. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಭದ್ರತೆ ಹಾಗೂ ಪುನರ್ವಸತಿ ಕಲ್ಪಿಸಬೇಕು. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆ ವಿರುದ್ಧ ಸರ್ಕಾರಗಳು ಕಠಿಣ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಸಮಾಜದಲ್ಲಿ ಜಾತಿ ಆಧಾರಿತ ತಾರತಮ್ಯ, ಅಸ್ಪೃಶ್ಯತೆ ಮತ್ತು ದಲಿತರ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ಪೊಲೀಸ್ ಹಾಗೂ ತನಿಖಾ ವ್ಯವಸ್ಥೆಯಲ್ಲಿ ಗಣನೀಯ ಬದಲಾವಣೆ ತರಬೇಕಿದೆ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಪ್ರಕರಣ ದಾಖಲಿಸುವುದು, ತನಿಖೆ ನಡೆಸುವುದು, ಆರೋಪಪಟ್ಟಿ ಸಲ್ಲಿಸುವುದು ಹಾಗೂ




ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವ ಪ್ರಕ್ರಿಯೆ ಪರಿಣಾಮ ಕಾರಿಯಾಗಬೇಕು.

ಆರೋಪಿಗಳು ಕಾನೂನಿನ ಲೋಪದೋಷಗಳ ಲಾಭ ಪಡೆದು ತಪ್ಪಿಸಿಕೊಳ್ಳದಂತೆ ವಿಶೇಷ ನಿಗಾ ವಹಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಆದೇಶ ನಗನೂರು, ರಸೀದ್ ಜಮಾದಾರ್, ಬಸವರಾಜ ಬಡಿಗೇರ, ಬಸವರಾಜ ಹಿರೇಹೆಸರೂರು, ಚಿದಾನಂದ ರಮೇಶ, ಹನುಮೇಶ, ಕಸಬಾಲಿಂಗಸುಗೂರ, ಗೌತಮ್ ಗೆಜ್ಜಲಗಟ್ಟಾ, ರಾಮಣ್ಣ ಕರ್ನಾಟಗಿ, ನಸೀರಿನಾ ಬೇಗಂ ಸೇರಿ ಇತರರು ಇದ್ದರು.

# ವಿದ್ಯಾಗಿರಿಗೆ ಸಮರ್ಪಕ ಸಾರಿಗೆ ವ್ಯವಸ್ಥೆಗೆ ಆಗ್ರಹ: ಎಸ್‌ಎಫ್‌ಐ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ

**ವಿಜಯ ದುಂಬಿ ಸುದ್ದಿ....**

**ದೇವದುರ್ಗ: ಪಟ್ಟಣದ ರಾಯಚೂರು ರಸ್ತೆಯಲ್ಲಿರುವ ವಿದ್ಯಾಗಿರಿ ಪ್ರದೇಶದ ಶಿಕ್ಷಣ ಸಂಸ್ಥೆಗಳು ಹಾಗೂ ವಿದ್ಯಾರ್ಥಿ ವಸತಿ ನಿಲಯಗಳಿಗೆ ತೆರಳುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸಮರ್ಪಕ ಬಸ್‌ಸೌಲಭ್ಯ, ಬಸ್ ನಿಲುಗಡೆ ಹಾಗೂ ಮೂಲಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.**

ವಿದ್ಯಾಗಿರಿ ಪ್ರದೇಶದಲ್ಲಿ 8ಕ್ಕೂ ಹೆಚ್ಚು ವಿದ್ಯಾರ್ಥಿ ವಸತಿ ನಿಲಯಗಳು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸೇರಿದಂತೆ ಹಲವು ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿನಿತ್ಯ ಸುಮಾರು 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ ವಸತಿ ನಿಲಯಗಳಿಂದ ಮುಖ್ಯ ರಸ್ತೆಯವರೆಗೆ ಸುಮಾರು 4 ಕಿ.ಮೀ.ವರೆಗೆ ಕಾಲ್ನಡಿಗೆಯಲ್ಲಿ ತೆರಳಿ ಬಸ್‌ಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ ಎಂದು ಎಸ್‌ಎಫ್‌ಐ ಜಿಲ್ಲಾ ಉಪಾಧ್ಯಕ್ಷ ಮಹಾಲಿಂಗ ದೊಡ್ಡಮನಿ ಹೇಳಿದರು.

ರಾಯಚೂರು ಮುಖ್ಯ ರಸ್ತೆಯ ಸಮೀಪದಲ್ಲೇ ವಿದ್ಯಾಗಿರಿ ಪ್ರದೇಶವಿದ್ದರೂ, ಈ ಮಾರ್ಗದಲ್ಲಿ ಸಂಚರಿಸುವ ಬಹುತೇಕ ಬಸ್‌ಗಳು ವಿದ್ಯಾರ್ಥಿಗಳಿಗಾಗಿ ನಿಲುಗಡೆ ಮಾಡುತ್ತಿಲ್ಲ. ಬೆರಳೆಣಿಕೆಯಷ್ಟು ಬಸ್‌ಗಳು ಮಾತ್ರ ನಿಲ್ಲುವುದರಿಂದ ವಿದ್ಯಾರ್ಥಿಗಳು ಬಿಸಿಲು, ಮಳೆ ಸೇರಿದಂತೆ ಪ್ರತಿಕೂಲ ಹವಾಮಾನದಲ್ಲೂ ತೊಂದರೆ ಅನುಭವಿಸುವಂತಾಗಿದೆ. ಇದರಿಂದ ವಿದ್ಯಾರ್ಥಿಗಳ ಅಮೂಲ್ಯ ಸಮಯವೂ ವ್ಯರ್ಥವಾಗುತ್ತಿದೆ ಎಂದು ಅವರು ಆರೋಪಿಸಿದರು.

ಹಲವು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಸಮಸ್ಯೆ ಬಗೆಹರಿದಿಲ್ಲ. ವಿದ್ಯಾರ್ಥಿಗಳ ಬೇಡಿಕೆಗಳನ್ನು



ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಡಿಪೋ ಮುತ್ತಿಗೆ ಹಾಕಿ ಹೋರಾಟ ನಡೆಸಬೇಕಾಗುತ್ತದೆ ಎಂದು ಮಹಾಲಿಂಗ ದೊಡ್ಡಮನಿ ಎಚ್ಚರಿಸಿದರು. ಎಸ್‌ಎಫ್‌ಐ ತಾಲೂಕು ಖಜಾಂಚಿ ದಿಲ್‌ಶಾದ್ ಮಾತನಾಡಿ, ವಿದ್ಯಾರ್ಥಿಗಳ ಶಿಕ್ಷಣ ಮತ್ತು ಸುರಕ್ಷತೆಯ ದೃಷ್ಟಿಯಿಂದ ವಿದ್ಯಾಗಿರಿ ಪ್ರದೇಶದ ಸಮೀಪದಲ್ಲಿ ಈ ಮಾರ್ಗದಲ್ಲಿ ಸಂಚರಿಸುವ ಎಲ್ಲಾ ಕೆಎಸ್‌ಆರ್‌ಟಿಸಿ ಹಾಗೂ ಇತರೆ ಬಸ್‌ಗಳಿಗೆ ಕಡ್ಡಾಯ ನಿಲುಗಡೆ ಕಲ್ಪಿಸಬೇಕು. ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್‌ಗಳ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ವಿದ್ಯಾಗಿರಿ ರಸ್ತೆಯ ಎರಡೂ ಬದಿಗಳಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಆರಂಭಿಕ ಕಾಮಗಾರಿ ನಡೆದಿದ್ದರೂ, ಕಾಮಗಾರಿ ಪೂರ್ಣಗೊಳ್ಳದೆ ಸ್ಥಗಿತಗೊಂಡಿದೆ. ಆದ್ದರಿಂದ ಬಸ್ ನಿಲ್ದಾಣಗಳ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ, ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು.

**ಅಧಿಕಾರಿಗಳ ಭೇಟಿ: ಬೇಡಿಕೆ ಈಡೇರಿಸುವ ಭರವಸೆ**

ಪ್ರತಿಭಟನಾ ಸ್ಥಳಕ್ಕೆ ಡಿಪೋ ಮ್ಯಾನೇಜರ್, ಪಿಡಬ್ಲ್ಯುಡಿ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಭೇಟಿ ನೀಡಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿದರು. ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳನ್ನು ಇಂದೇ ಹಾಗೂ ನಾಳೆಯೊಳಗೆ ಈಡೇರಿಸುವ ಭರವಸೆ ನೀಡಿದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆ ಮೂರು ಸಮಯಗಳಲ್ಲಿ ಪ್ರತ್ಯೇಕ ಬಸ್‌ಗಳ ವ್ಯವಸ್ಥೆ ಮಾಡಲಾಗುವುದು. ಗ್ರಾಮ ಪಂಚಾಯಿತಿ ವತಿಯಿಂದ ರಾಜ್ಯ ಹೆದ್ದಾರಿಯಿಂದ ವಿದ್ಯಾರ್ಥಿ ವಸತಿ ನಿಲಯಗಳವರೆಗೆ ಬೀದಿ ದೀಪ ಅಳವಡಿಸಲಾಗುವುದು. ವಸತಿ ನಿಲಯಗಳಿಗೆ ತೆರಳುವ ರಸ್ತೆಯ ಅಕ್ಕಪಕ್ಕದ ಜಾಲಿ ಗಿಡಗಳನ್ನು ತೆರವುಗೊಳಿಸಿ ತಾತ್ಕಾಲಿಕ ಬಸ್ ನಿಲ್ದಾಣದ ವ್ಯವಸ್ಥೆ ಮಾಡಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದರು.

**ಪ್ರಮುಖ ಬೇಡಿಕೆಗಳು**

1. ವಿದ್ಯಾಗಿರಿ ಪ್ರದೇಶದ ಸಮೀಪದಲ್ಲಿ ಸಂಚರಿಸುವ ಎಲ್ಲಾ ಬಸ್‌ಗಳಿಗೆ ಕಡ್ಡಾಯ ನಿಲುಗಡೆ ಕಲ್ಪಿಸಿ, ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್‌ಗಳ ವ್ಯವಸ್ಥೆ ಮಾಡಬೇಕು.
2. ಎರಡೂ ಬದಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಬಸ್ ನಿಲ್ದಾಣಗಳ ಕಾಮಗಾರಿ ಕೂಡಲೇ ಪೂರ್ಣಗೊಳಿಸಿ, ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು.
3. ನಿಗದಿತ ಸ್ಥಳದಲ್ಲಿ ಸುರಕ್ಷಿತವಾಗಿ ಬಸ್ ನಿಲುಗಡೆ ಮಾಡುವಂತೆ ಚಾಲಕರು ಮತ್ತು ನಿರ್ವಾಹಕರಿಗೆ ಸೂಚನೆ ನೀಡಬೇಕು.
4. ವಿದ್ಯಾಗಿರಿ ಪ್ರದೇಶದಲ್ಲಿ ನಿಯಂತ್ರಕರನ್ನು ನೇಮಕ ಮಾಡಬೇಕು.
5. ರಾಜ್ಯ ಹೆದ್ದಾರಿಯಿಂದ ವಿದ್ಯಾರ್ಥಿ ವಸತಿ ನಿಲಯಗಳವರೆಗೆ ಬೀದಿ ದೀಪ ಅಳವಡಿಸಬೇಕು.

ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಶಬ್ಬೀರ್ ಜಾಲಹಳ್ಳಿ, ಯೂಸುಫ್ ಗ್ವಾಡಕರ್, ಎಸ್‌ಎಫ್‌ಐ ತಾಲೂಕು ಅಧ್ಯಕ್ಷ ಭಾಷಾ ಶಾನ್ಯರ್, ಕಾರ್ಯದರ್ಶಿ ಸಂತೋಷ್ ತ್ಯಾಪ್ಲಿ, ಬಾಬು ಶ್ಯಾನೇರ್, ಅಭಿಷೇಕ್, ಶಿವು, ನಿಂಗಯ್ಯ ಸುಣದಕಲ್, ಯಲ್ಲಪ್ಪ ಸುಣದಕಲ್, ಶಿವರಾಜ ಮುಂಡರಗಿ, ಲಕ್ಷ್ಮಣ ಪರಪೂರ, ರಂಗನಾಥ, ಹನುಮಂತ, ನಾಗರಾಜ ಪರಪೂರ, ಅಮೀರ್ ಹುಸೇನ್ ಸೇರಿದಂತೆ ಹಲವರು ಹಾಗೂ ವಿದ್ಯಾರ್ಥಿಗಳಾದ ಅನೀತಾ, ಶಿಲ್ಪಾ, ರೇಷ್ಮಾ, ಸುನೀತಾ, ಬಂಧನ ವಾಜ, ಆಜಿಮಲಾಗಾ, ಹನುಮಂತ ಗಲಗ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ನದಾಫ್ ಸಮಾಜದಿಂದ ಅರ್ಥಪೂರ್ಣ ಈದ್ ಮಿಲಾದ್ ಆಚರಣೆ

**ವಿಜಯ ದುಂಬಿ ಸುದ್ದಿ....**

**ಮುಧೋಳ: ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಜನ್ಮದಿನದ ಅಂಗವಾಗಿ ನದಾಫ್ ಸಮಾಜದ ಹಿರಿಯರು, ಯುವಕರು ಹಾಗೂ ಮಹಿಳೆಯರು ಒಗ್ಗೂಡಿ ಈದ್ ಮಿಲಾದ್ ಹಬ್ಬವನ್ನು ಅರ್ಥಪೂರ್ಣವಾಗಿ ಹಾಗೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ರೀತಿಯಲ್ಲಿ ಆಚರಿಸಿದರು.**

ಈದ್ ಮಿಲಾದ್ ಅಂಗವಾಗಿ ನದಾಫ್ ಸಮಾಜದ ವತಿಯಿಂದ ಮುಧೋಳ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ಹಣ್ಣುಗಳ ಕಿಟ್‌ಗಳನ್ನು ವಿತರಿಸಲಾಯಿತು. ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿಗಳು, ವೈದ್ಯರು, ಆರೋಗ್ಯ ರಕ್ಷಾ ಸಮಿತಿಯ ಸದಸ್ಯರಾದ ಲಕ್ಕಪ್ಪ ಬಂಡಿವಡ್ಡರ, ಡಾ. ಗಣಾಚಾರಿ ಹಾಗೂ ಸಿಬ್ಬಂದಿಯ ಸಹಕಾರದೊಂದಿಗೆ ಕಾರ್ಯಕ್ರಮ ನಡೆಯಿತು. ನಂತರ ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಗೆ ತೆರಳಿದ ಸಮಾಜದ ಸದಸ್ಯರು ಮಕ್ಕಳೊಂದಿಗೆ ಸಮಯ ಕಳೆದು, ಅವರೊಂದಿಗೆ ಬೆರೆತು ಊಟ ಬಡಿಸಿ, ತಾವೂ ಅವರೊಂದಿಗೆ ಊಟ ಮಾಡುವ




ಮೂಲಕ ಈದ್ ಮಿಲಾದ್ ಆಚರಿಸಿದರು.

ಸಮಾಜದ ಹಿರಿಯರಾದ ಸೈಯದ್ ನದಾಫ್ ಮಾತನಾಡಿ, "ಜಗತ್ತಿಗೆ ಶಾಂತಿ, ಸಹಬಾಳ್ವೆ ಹಾಗೂ ಮಾನವೀಯತೆಯ ಸಂದೇಶ ಸಾರಿದ ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರ ಜನ್ಮದಿನವನ್ನು ಸಮಾಜಮುಖಿ ಕಾರ್ಯಗಳ ಮೂಲಕ ಆಚರಿಸುವುದು ನಮ್ಮೆಲ್ಲರ ಕರ್ತವ್ಯ. ಈ ಹಿನ್ನೆಲೆಯಲ್ಲಿ ರೋಗಿಗಳಿಗೆ ಹಣ್ಣು ವಿತರಣೆ ಹಾಗೂ ಬುದ್ಧಿಮಾಂದ್ಯ ಮಕ್ಕಳೊಂದಿಗೆ ಊಟ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗಿದೆ" ಎಂದರು.

ಸಮಾಜದ ಹಿರಿಯರಾದ ಲಾಲಸಾಬ ನದಾಫ್ ಮಾತನಾಡಿ, "ಪ್ರತಿ ವರ್ಷದಂತೆ ಈ ವರ್ಷವೂ ಈದ್ ಮಿಲಾದ್ ಆಚರಣೆಯನ್ನು ಸಮಾಜಕ್ಕೆ ಉತ್ತಮ ಸಂದೇಶ ನೀಡುವ ರೀತಿಯಲ್ಲಿ ನಡೆಸಲು ನಿರ್ಧರಿಸಲಾಗಿತ್ತು.

ರೋಗಿಗಳಿಗೆ ಹಣ್ಣುಗಳ ಕಿಟ್ ವಿತರಿಸುವುದರ ಜೊತೆಗೆ ಬುದ್ಧಿಮಾಂದ್ಯ ಮಕ್ಕಳೊಂದಿಗೆ ಬೆರೆತು, ಅವರೊಂದಿಗೆ ಸಮಯ ಕಳೆದು, ಊಟ ಮಾಡುವ ಮೂಲಕ ಮಾನವೀಯತೆ ಮೆರೆದಿದ್ದೇವೆ. ಎಲ್ಲರೂ ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರು ತೋರಿಸಿಕೊಟ್ಟ ದಾರಿಯಲ್ಲಿ ನಡೆದು, ಸಮಾಜದಲ್ಲಿ ಶಾಂತಿ ಮತ್ತು ಸಹೋದರತ್ವ ಬೆಳೆಸಬೇಕು" ಎಂದು ಹೇಳಿದರು. ಬುದ್ಧಿಮಾಂದ್ಯ ಮಕ್ಕಳ ಸಂಸ್ಥೆಗೆ ಅಗತ್ಯವಿರುವ ಸೌಲಭ್ಯಗಳ ಕುರಿತು ವಿಚಾರಿಸಿದಾಗ, ನೀರನ್ನು ಮೇಲಕ್ಕೆತ್ತಲು ಒಂದು ಎಚ್‌ಪಿ ಸಾಮರ್ಥ್ಯದ ಮೋಟಾರ್ ಅಗತ್ಯವಿದೆ ಎಂದು ಸಂಸ್ಥೆಯವರು ತಿಳಿಸಿದರು.

ಇದಕ್ಕೆ ಸ್ಪಂದಿಸಿದ ಲಾಲಸಾಬ ನದಾಫ್ ಅವರು, "ಎರಡು ದಿನಗಳೊಳಗೆ ನದಾಫ್ ಸಮಾಜದ ವತಿಯಿಂದ ಒಂದು ಎಚ್‌ಪಿ ಮೋಟಾರ್ ಒದಗಿಸಲಾಗುವುದು" ಎಂದು ಭರವಸೆ ನೀಡಿದರು. ಕುಮಾರಿ ರುಬಿನಾ ನದಾಫ್ ಮಾತನಾಡಿ, "ಬುದ್ಧಿಮಾಂದ್ಯ ಮಕ್ಕಳೊಂದಿಗೆ ಊಟ ಮಾಡುವ ಮೂಲಕ ಈದ್ ಮಿಲಾದ್ ಆಚರಿಸಿರುವುದು ಸಂತೋಷದ ಸಂಗತಿ. ಈ ಮಕ್ಕಳು ಶೀಘ್ರ ಗುಣಮುಖರಾಗಿ ಸಾಮಾನ್ಯರಂತೆ ಜೀವನ ನಡೆಸುವಂತಾಗಲಿ ಎಂದು ಸೃಷ್ಟಿಕರ್ತ ಅಲ್ಲಾಹನಲ್ಲಿ ಪ್ರಾರ್ಥಿಸೋಣ" ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ಹಿರಿಯರಾದ ಪ್ರಥಮ ದರ್ಜೆ ಗುತ್ತಿಗೆದಾರ ಮಮ್ಮದ ನದಾಫ್, ಲ್ಯಾಬ್ ಟೆಕ್ನಿಷಿಯನ್ ಇಬ್ರಾಹಿಂ ನದಾಫ್, ಸೈಯದ್ ನದಾಫ್, ದಾವಲಸಾಬ ನದಾಫ್, ರಫೀಕ್ ನದಾಫ್, ಉಸ್ಮಾನ್ ನದಾಫ್, ಬ್ಯಾಟರಿ ಗ್ಯಾರೇಜ್ ಮಾಲೀಕರಾದ ಇಬ್ರಾಹಿಂ ನದಾಫ್, ಖಾಸಿಂ ನದಾಫ್, ಅಮೀನಸಾಬ ನದಾಫ್, ಯಾಸೀನ್ ನದಾಫ್, ಹಣ್ಣು ವ್ಯಾಪಾರಿ ಮೊಹಮ್ಮದ್ ನದಾಫ್, ಆಲಗುಂಡಿ ಬಿ.ಕೆ. ಅಮೀನಸಾಬ ನದಾಫ್ ಸೇರಿದಂತೆ ಸಮಾಜದ ಹಿರಿಯರು, ತಾಯಂದಿರು, ಯುವಕರು ಹಾಗೂ ಸಮಾಜದ ಬಂಧುಗಳು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಎಲ್ಲರಿಗೂ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಸಮಾಜದ ಎಲ್ಲ ಬಂಧು-ಬಾಂಧವರಿಗೆ ನದಾಫ್ ಸಮಾಜದ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

# ಮೊಬೈಲ್: ಜ್ಞಾನಕ್ಕೆ ಸಾಧನವಾಗಲಿ, ಬದುಕಿಗೆ ಬಂಧನವಲ್ಲ




ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಮೊಬೈಲ್ ಫೋನ್ ಮಾನವನ ದಿನನಿತ್ಯದ ಜೀವನದ ಅವಿಭಾಜ್ಯ ಅಂಗವಾಗಿದೆ. ಕೆಲವೇ ದಶಕಗಳ ಹಿಂದೆ ದೂರದಲ್ಲಿರುವ ವ್ಯಕ್ತಿಯೊಂದಿಗೆ ಮಾತನಾಡಲು ಪತ್ರ, ಲ್ಯಾಂಡ್‌ಲೈನ್ ಅಥವಾ ಇತರ ಸಂವಹನ ವ್ಯವಸ್ಥೆಗಳ ಅವಲಂಬನೆ ಇತ್ತು. ಆದರೆ ಇಂದು ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯನ್ನು ಕ್ಷಣಾರ್ಧದಲ್ಲಿ ಸಂಪರ್ಕಿಸುವಷ್ಟು ತಂತ್ರಜ್ಞಾನ ಬೆಳೆದಿದೆ.

**ಮೊಬೈಲ್ ಕೇವಲ ಮಾತನಾಡುವ ಸಾಧನವಲ್ಲ.** ಜ್ಞಾನ, ಶಿಕ್ಷಣ, ವಿಜ್ಞಾನ, ಮನರಂಜನೆ, ಬ್ಯಾಂಕಿಂಗ್, ವ್ಯಾಪಾರ, ಉದ್ಯೋಗ, ಕೃಷಿ, ಆರೋಗ್ಯ ಮಾಹಿತಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅದು ಉಪಯುಕ್ತ ಸಾಧನವಾಗಿದೆ. ಆದರೆ ಅಗತ್ಯಕ್ಕೆ ತಕ್ಕಂತೆ ಬಳಸಬೇಕಾದ ಮೊಬೈಲ್ ಅತಿಯಾದ ಬಳಕೆಯಿಂದ ಸಮಸ್ಯೆಯಾಗಿ ಪರಿಣಮಿಸುತ್ತಿರುವುದು ಆತಂಕಕಾರಿ ಬೆಳವಣಿಗೆ.

**ಮಕ್ಕಳಿಗೆ ಮೊಬೈಲ್:** ಶಿಕ್ಷಣದ ಸಾಧನವೇ ವ್ಯಸನದ ಕಾರಣವೇ ಇಂದಿನ ಮಕ್ಕಳು ಚಿಕ್ಕ ವಯಸ್ಸಿನಲ್ಲಿಯೇ ಮೊಬೈಲ್ ಬಳಕೆಗೆ ಪರಿಚಿತರಾಗುತ್ತಿದ್ದಾರೆ. ಆನ್‌ಲೈನ್ ತರಗತಿಗಳು, ಶೈಕ್ಷಣಿಕ ವಿಡಿಯೊಗಳು, ಡಿಜಿಟಲ್ ಪುಸ್ತಕಗಳು, ಶೈಕ್ಷಣಿಕ ಆ?ಯಪ್‌ಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಮೊಬೈಲ್ ಸಹಕಾರಿಯಾಗಿದೆ.

ಆದರೆ ಶಿಕ್ಷಣದ ಹೆಸರಿನಲ್ಲಿ ಮೊಬೈಲ್ ಕೈಗೆ ಬಂದ ನಂತರ ಗಂಟೆಗಟ್ಟಲೆ ಆಟ, ಕಿರು ವಿಡಿಯೊ, ಸಾಮಾಜಿಕ ಜಾಲತಾಣ ಹಾಗೂ ಮನರಂಜನಾ ವಿಷಯಗಳಲ್ಲಿ ಮುಳುಗುವುದು ಮಕ್ಕಳಲ್ಲಿ ಗಮನಾರ್ಹ ಸಮಸ್ಯೆಗಳಿಗೆ ಕಾರಣವಾಗಬಹುದು.

**ಮೊಬೈಲ್ ಬಳಕೆಯ ಉದ್ದೇಶ**

'ಕಲಿಯುವುದು'ಯಿಂದ 'ಕಾಲ ಕಳೆಯುವುದು'ಕ್ಕೆ ಬದಲಾಗಬಾರದು. ಅತಿಯಾದ ಮೊಬೈಲ್ ಬಳಕೆಯಿಂದ ಆಗುವ ತೊಂದರೆಗಳು ಮೊಬೈಲ್ ಅನ್ನು ದೀರ್ಘಕಾಲ ನಿರಂತರವಾಗಿ ಬಳಸುವುದರಿಂದ ಮಕ್ಕಳ ಮತ್ತು ಯುವಜನರ ದಿನಚರಿಯಲ್ಲಿ ಹಲವು ಬದಲಾವಣೆಗಳು ಉಂಟಾಗಬಹುದು.

* ಓದಿನ ಮೇಲೆ ಏಕಾಗ್ರತೆ ಕಡಿಮೆಯಾಗಬಹುದು.
* ನಿದ್ರೆಯ ಸಮಯ ಹಾಗೂ ಗುಣಮಟ್ಟ ಹದಗೆಡಬಹುದು.
* ದೈಹಿಕ ಚಟುವಟಿಕೆ ಕಡಿಮೆಯಾಗಿ ಸೋಮಾರಿತನ ಹೆಚ್ಚಾಗಬಹುದು.
* ಕಣ್ಣುಗಳಿಗೆ ಒತ್ತಡ, ಕಣ್ಣಿನ ಆಯಾಸ ಮತ್ತು ತಲೆನೋವು ಕಾಣಿಸಿಕೊಳ್ಳಬಹುದು.
* ಕುಟುಂಬದವರೊಂದಿಗೆ ಮಾತನಾಡುವ ಹಾಗೂ ಬೆರೆಯುವ ಸಮಯ ಕಡಿಮೆಯಾಗಬಹುದು.
* ಸಾಮಾಜಿಕ ಜಾಲತಾಣಗಳ ಮೇಲಿನ ಅವಲಂಬನೆ ಹೆಚ್ಚಾಗಬಹುದು.
* ಇತರರ ಜೀವನದೊಂದಿಗೆ ತಮ್ಮ ಜೀವನವನ್ನು ಹೋಲಿಸಿಕೊಂಡು ಮಾನಸಿಕ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ.
* ಓದುವ ಅಭ್ಯಾಸ, ಪುಸ್ತಕಗಳ ಮೇಲಿನ ಆಸಕ್ತಿ ಹಾಗೂ ಸೃಜನಶೀಲ ಚಟುವಟಿಕೆಗಳಿಗೆ ಸಮಯ ಕಡಿಮೆಯಾಗಬಹುದು.
* ಆನ್‌ಲೈನ್ ಗೇಮಿಂಗ್ ಮತ್ತು ನಿರಂತರ ಕಿರು ವಿಡಿಯೊ ವೀಕ್ಷಣೆಯಂತಹ ಅಭ್ಯಾಸಗಳು ನಿಯಂತ್ರಣ ತಪ್ಪುವ ಸಾಧ್ಯತೆ ಇದೆ.

ವಿಶೇಷವಾಗಿ ರಾತ್ರಿ ಸಮಯದಲ್ಲಿ ಮೊಬೈಲ್ ಬಳಸುತ್ತಾ ಜಾಗರಣೆ ಮಾಡುವ ಅಭ್ಯಾಸವು ವಿದ್ಯಾರ್ಥಿಗಳ ಮರುದಿನದ ಕಲಿಕೆ ಮತ್ತು ದೈನಂದಿನ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

**ಮೊಬೈಲ್‌ನಿಂದ ಪ್ರಯೋಜನವೂ ಅಪಾರ**

ಮೊಬೈಲ್ ಬಳಕೆಯಿಂದ ಆಗುವ ತೊಂದರೆಗಳನ್ನು ಮಾತ್ರ ಹೇಳುವುದು ಸರಿಯಲ್ಲ. ಸರಿಯಾದ ರೀತಿಯಲ್ಲಿ ಬಳಸಿದರೆ ಅದು ಕೈಯಲ್ಲಿರುವ ಒಂದು ಚಿಕ್ಕ ಗ್ರಂಥಾಲಯದಂತೆಯೇ ಕೆಲಸ ಮಾಡಬಹುದು. ವಿದ್ಯಾರ್ಥಿಗಳು ಮೊಬೈಲ್ ಮೂಲಕ ಗಣಿತದ ಕಠಿಣ ಸಮಸ್ಯೆಗಳಿಗೆ ವಿವರಣೆ ಪಡೆಯಬಹುದು. ವಿಜ್ಞಾನ ಪ್ರಯೋಗಗಳ ವಿಡಿಯೊಗಳನ್ನು ವೀಕ್ಷಿಸಬಹುದು. ಇಂಗ್ಲಿಷ್ ಸೇರಿದಂತೆ ವಿವಿಧ ಭಾಷೆಗಳನ್ನು ಕಲಿಯಬಹುದು. ವಿಶ್ವದ ಪ್ರಮುಖ ವಿಜ್ಞಾನಿಗಳ ಆವಿಷ್ಕಾರಗಳ ಬಗ್ಗೆ ತಿಳಿದುಕೊಳ್ಳಬಹುದು. ಶೈಕ್ಷಣಿಕ ವೆಬ್‌ಸೈಟ್‌ಗಳು, ಡಿಜಿಟಲ್ ಗ್ರಂಥಾಲಯಗಳು ಹಾಗೂ ಆನ್‌ಲೈನ್ ಕೋರ್ಸ್‌ಗಳ ಮೂಲಕ ಜ್ಞಾನವನ್ನು ವಿಸ್ತರಿಸಬಹುದು.

**ರೈತರು ಹವಾಮಾನ,** ಮಾರುಕಟ್ಟೆ ದರ, ಕೃಷಿ ತಂತ್ರಜ್ಞಾನ ಮತ್ತು ಸರ್ಕಾರಿ ಯೋಜನೆಗಳ ಮಾಹಿತಿಯನ್ನು ಪಡೆಯಬಹುದು. ಉದ್ಯೋಗಾಕಾಂಕ್ಷಿಗಳು ಉದ್ಯೋಗಾವಕಾಶ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿಯನ್ನು ಪಡೆದುಕೊಳ್ಳಬಹುದು. ಹೀಗಾಗಿ ಮೊಬೈಲ್ ಒಳ್ಳೆಯದೋ ಕೆಟ್ಟದ್ದೋ ಎಂಬುದಕ್ಕಿಂತ ಅದನ್ನು ನಾವು ಹೇಗೆ ಬಳಸುತ್ತೇವೆ ಎಂಬುದೇ ಮುಖ್ಯ.

**ವಿದ್ಯಾರ್ಥಿಗಳು ಮೊಬೈಲ್ ಅನ್ನು ಹೇಗೆ ಬಳಸಬೇಕು** ಮೊಬೈಲ್ ಬಳಕೆಗೆ ವಿದ್ಯಾರ್ಥಿಗಳು ಕೆಲವು ಸರಳ ನಿಯಮಗಳನ್ನು ರೂಪಿಸಿಕೊಳ್ಳಬೇಕು. ಮೊದಲನೆಯದಾಗಿ, ಮೊಬೈಲ್ ಕೈಗೆತ್ತಿಕೊಳ್ಳುವ ಮೊದಲು 'ನಾನು ಇದನ್ನು ಏಕೆ ಬಳಸುತ್ತಿದ್ದೇನೆ?' ಎಂದು ಪ್ರಶ್ನಿಸಿಕೊಳ್ಳಬೇಕು. ಎರಡನೆಯದಾಗಿ, ಓದಿಗೆ ಅಗತ್ಯವಿರುವ ವಿಷಯಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಬಳಕೆಯ ಸಮಯವನ್ನು ನಿಗದಿಪಡಿಸಬೇಕು. ಮೂರನೆಯದಾಗಿ, ಓದುವ ಸಂದರ್ಭದಲ್ಲಿ ಅನಗತ್ಯ ನೋಟಿಫಿಕೇಶನ್‌ಗಳನ್ನು ಸ್ಥಗಿತಗೊಳಿಸಿ ಏಕಾಗ್ರತೆಯನ್ನು ಕಾಪಾಡಿಕೊಳ್ಳಬೇಕು.

ನಾಲ್ಕನೆಯದಾಗಿ, ಊಟದ ಸಮಯ, ತರಗತಿಯ ಸಮಯ ಹಾಗೂ ಕುಟುಂಬದೊಂದಿಗೆ ಮಾತನಾಡುವ ಸಮಯದಲ್ಲಿ ಮೊಬೈಲ್ ಬಳಕೆಯನ್ನು ತಪ್ಪಿಸಬೇಕು. ಐದನೆಯದಾಗಿ, ಮಲಗುವ ಮುನ್ನ ಮೊಬೈಲ್ ನೋಡುವ ಅಭ್ಯಾಸವನ್ನು ಕಡಿಮೆ ಮಾಡಬೇಕು. ಮೊಬೈಲ್ ಅನ್ನು ಮಲಗುವ ಸ್ಥಳದಿಂದ ದೂರವಿಡುವ ಅಭ್ಯಾಸ ಬೆಳೆಸಿಕೊಳ್ಳುವುದು ಉತ್ತಮ.

**ಪೋಷಕರ ಪಾತ್ರ ಬಹಳ ಮುಖ್ಯ**

ಮಕ್ಕಳಿಗೆ ಮೊಬೈಲ್ ಕೊಡಬಾರದು ಎಂಬುದೊಂದೇ ಪರಿಹಾರವಲ್ಲ. ಮೊಬೈಲ್ ಅನ್ನು ಜವಾಬ್ದಾರಿಯುತವಾಗಿ ಬಳಸುವ ಸಂಸ್ಕಾರವನ್ನು ಮಕ್ಕಳಲ್ಲಿ ಬೆಳೆಸುವುದು ಮುಖ್ಯ. ಪೋಷಕರು ಮಕ್ಕಳ ಮೊಬೈಲ್ ಬಳಕೆಯನ್ನು ಗಮನಿಸಬೇಕು. ಆದರೆ ಕೇವಲ ನಿರ್ಬಂಧ ಹೇರುವ ಬದಲು ಅವರೊಂದಿಗೆ ಸ್ನೇಹದಿಂದ ಮಾತನಾಡಿ, ಮೊಬೈಲ್ ಬಳಕೆಯ ಉದ್ದೇಶ ಮತ್ತು ಮಿತಿಗಳನ್ನು ತಿಳಿಸಬೇಕು.

**ಮಕ್ಕಳು ಮೊಬೈಲ್‌ನಲ್ಲಿ ಏನು** ನೋಡುತ್ತಿದ್ದಾರೆ ಎಂಬುದಕ್ಕಿಂತ ಅವರು ಏಕೆ ನೋಡುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಪೋಷಕರಿಗೆ ಹೆಚ್ಚು ಮುಖ್ಯ.

**ಶಿಕ್ಷಕರ ಜವಾಬ್ದಾರಿಯೂ ಇದೆ**

ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಡಿಜಿಟಲ್ ಸಾಕ್ಷರತೆಯ ಜೊತೆಗೆ ಡಿಜಿಟಲ್ ಶಿಸ್ತು ಕಲಿಸಬೇಕು. ಮೊಬೈಲ್‌ನಲ್ಲಿ ದೊರೆಯುವ ಪ್ರತಿಯೊಂದು ಮಾಹಿತಿಯೂ ಸತ್ಯವಲ್ಲ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಬೇಕು. ಸುಳ್ಳು ಸುದ್ದಿ, ನಕಲಿ ಖಾತೆಗಳು, ಆನ್‌ಲೈನ್ ವಂಚನೆ, ವೈಯಕ್ತಿಕ ಮಾಹಿತಿಯ ದುರ್ಬಳಕೆ, ಅಪರಿಚಿತರೊಂದಿಗೆ ಸಂವಹನ ಹಾಗೂ ಸೈಬರ್ ಕಿರುಕುಳದಂತಹ ಅಪಾಯಗಳ ಕುರಿತು ಮಕ್ಕಳಿಗೆ ಅರಿವು ಮೂಡಿಸುವುದು ಅಗತ್ಯ.

**ಮೊಬೈಲ್ ಬಳಕೆಗೆ 'ಸಮಯದ ಶಿಸ್ತು' ಅಗತ್ಯ**

ಮೊಬೈಲ್ ಅನ್ನು ಸಂಪೂರ್ಣವಾಗಿ ದೂರವಿಡುವುದು ಇಂದಿನ ಕಾಲದಲ್ಲಿ ಎಲ್ಲರಿಗೂ ಸಾಧ್ಯವಿಲ್ಲ. ಆದ್ದರಿಂದ 'ಮೊಬೈಲ್ ಇಲ್ಲದ ಜೀವನ'ಕ್ಕಿಂತ 'ಮೊಬೈಲ್‌ನೊಂದಿಗೆ ನಿಯಂತ್ರಿತ ಜೀವನ' ಎಂಬ ಮನೋಭಾವ ಬೆಳೆಸಿಕೊಳ್ಳಬೇಕು.

ಒಂದು ಗಂಟೆ ಮೊಬೈಲ್ ಬಳಸಿದರೆ ಅದರ ನಂತರ ಸ್ವಲ್ಪ ಸಮಯ ಪುಸ್ತಕ ಓದುವುದು, ಹೊರಾಂಗಣ ಆಟ ಆಡುವುದು, ಕುಟುಂಬದವರೊಂದಿಗೆ ಮಾತನಾಡುವುದು ಅಥವಾ ಸೃಜನಶೀಲ ಚಟುವಟಿಕೆಯಲ್ಲಿ ತೊಡಗುವುದು ಉತ್ತಮ.

ಮಕ್ಕಳ ಕೈಯಲ್ಲಿ ಮೊಬೈಲ್ ಇರುವುದಕ್ಕಿಂತ ಅವರ ಕೈಯಲ್ಲಿ ಪುಸ್ತಕ, ಕ್ರೀಡಾ ಸಾಮಗ್ರಿ, ಕಲಿಕಾ ಸಾಧನ ಮತ್ತು ಸೃಜನಶೀಲತೆಯ ಅವಕಾಶ ಇರಬೇಕು.

**ವಿಜ್ಞಾನವನ್ನು ಬಳಸೋಣ;** ವಿಜ್ಞಾನಕ್ಕೆ ಗುಲಾಮರಾಗಬೇಡ ವಿಜ್ಞಾನ ಮಾನವನ ಜೀವನವನ್ನು ಸುಲಭಗೊಳಿಸಲು ಹುಟ್ಟಿಕೊಂಡಿದೆ. ಮೊಬೈಲ್ ಕೂಡ ವಿಜ್ಞಾನದ ಅದ್ಭುತ ಕೊಡುಗೆ. ಆದರೆ ಯಾವುದೇ ತಂತ್ರಜ್ಞಾನವನ್ನು ಮಿತಿಮೀರಿಸಿ ಬಳಸಿದಾಗ ಅದರ ಪ್ರಯೋಜನವೇ ಸಮಸ್ಯೆಯಾಗಿ ಬದಲಾಗಬಹುದು. ಆದ್ದರಿಂದ ವಿದ್ಯಾರ್ಥಿಗಳು ಮತ್ತು ಯುವಜನರು ಮೊಬೈಲ್ ಅನ್ನು ಮನರಂಜನೆಗಾಗಿ ಮಾತ್ರವಲ್ಲ, ಜ್ಞಾನಾರ್ಜನೆ, ಕೌಶಲ್ಯಾಭಿವೃದ್ಧಿ ಮತ್ತು ಭವಿಷ್ಯ ನಿರ್ಮಾಣಕ್ಕಾಗಿ ಬಳಸಬೇಕು.

**ಮೊಬೈಲ್ ನಮ್ಮ ಕೈಯಲ್ಲಿರಲಿ;** ನಮ್ಮ ಸಮಯ ಮತ್ತು ಮನಸ್ಸು ಮೊಬೈಲ್‌ನ ಕೈಯಲ್ಲಿರಬಾರದು. ಇಂದಿನ ಮಕ್ಕಳು ಮತ್ತು ಯುವಜನರು ಈ ಸಣ್ಣ ಬದಲಾವಣೆಯನ್ನು ಅಳವಡಿಸಿಕೊಂಡರೆ, ಮೊಬೈಲ್ ಅವರ ಭವಿಷ್ಯವನ್ನು ಹಾಳುಮಾಡುವ ಸಾಧನವಲ್ಲ; ಅವರ ಜ್ಞಾನ ಮತ್ತು ಯಶಸ್ಸಿನತ್ತ ಕರೆದೊಯ್ಯುವ ಶಕ್ತಿಶಾಲಿ ಸಾಧನವಾಗಬಹುದು.

## ಸಂಕಷ್ಟ ಸಮಯದಲ್ಲಿ ಎಲ್ಲರೂ ಒಂದಾಗಬೇಕು

ವಿಜಯ ದುಂಬಿ ಸುದ್ದಿ....

ಬೆಂಗಳೂರು: ನೇಪಾಳದಲ್ಲಿ ಬಹಳ ದೊಡ್ಡ ದುರಂತ ಆಗಿದೆ. ದೇವರ ದರ್ಶನಕ್ಕೆ ಹೋದವರು ಬಹಳ ಮಂದಿ ನಾಪತ್ತೆ ಆಗಿದ್ದಾರೆ. ನಮಗೆಲ್ಲರಿಗೂ ದುಃಖ ಆಗಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ನವದೆಹಲಿಯಲ್ಲಿಂದು ಸುದ್ಧಿಗಾರರೊಂದಿಗೆ ಮಾತನಾಡಿದ ಅವರು ಸಂಕಷ್ಟದ ಸಮಯದಲ್ಲಿ ನಾವೆಲ್ಲರೂ ಒಂದಾಗಿರಬೇಕು ಭಾರತ ಸರ್ಕಾರ ನೇಪಾಳಕ್ಕೆ ಆದಷ್ಟು ಹೆಚ್ಚಿನ ಸಹಾಯ ಮಾಡಬೇಕಿದೆ ಎಂದರು. ಪ್ರವಾಹದಲ್ಲಿ ಭಾರತೀಯರು ನಾಪತ್ತೆಯಾಗಿದ್ದವರನ್ನು ಹುಡುಕಿ ಮನೆಗೆ ಕಳಿಸಬೇಕು. ಶವಗಳನ್ನು ಹುಡುಕಿ ಅವರ ಮನೆಗೆ ಕಳಿಸಬೇಕು ಎಂದು ಹೇಳಿದರು. ಪ್ರವಾಹದಲ್ಲಿ ಸತ್ತವರ ಕುಟುಂಬಕ್ಕೆ ತುಂಬಲಾರದ ನಷ್ಟ ಆಗಿದೆ ಎಂದು ಅವರು ತಿಳಿಸಿದರು. ಕರ್ನಾಟಕ ರಾಜ್ಯ ಸಚಿವ ಸಂಪುಟ ಸರ್ಜರಿ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಎಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ ಅವರನ್ನೇ ಈ ಬಗ್ಗೆ ಕೇಳಿ ಎಂದು ಹೇಳಿ ಈ ಬಗ್ಗೆ ಹೆಚ್ಚು ಮಾತನಾಡಲಿಲ್ಲ.

ನೇಪಾಳ ಪ್ರವಾಹ : 300ಕ್ಕೂ ಹೆಚ್ಚು ಭಾರತೀಯರ ನಾಪತ್ತೆ

ಖಾಲಿ ನಿವೇಶನ ಸ್ವಚ್ಛತೆ ಅಭಿಯಾನಕ್ಕೆ ಚಾಲನೆ :ಮಾಲೀಕರಿಂದಲೇ ವೆಚ್ಚ ವಸೂಲಿ ವಿದ್ಯಾರ್ಥಿಗಳ ಸಮಸ್ಯೆ, ಶಿಕ್ಷಣ ಸುಧಾರಣೆಗೆ ಸಂಪುಟ ಉಪಸಮಿತಿ ರಚನೆ

ವಿಜಯ ದುಂಬಿ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಸಂಪುಟ ಸರ್ಜರಿ : ದೆಹಲಿಗೆ ಸಿಎಂ

ವಿಜಯ ದುಂಬಿ ಸುದ್ದಿ....

**ಬೆಂಗಳೂರು: ಮೂರನೇ ಸುತ್ತಿನ ಸಂಪುಟ ವಿಸ್ತರಣೆಗೆ ಮುಹೂರ್ತ ನಿಗದಿ ಮಾಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ದೆಹಲಿಗೆ ತೆರಳಿದ್ದು, ಇನ್ನೆರಡು ಮೂರು ದಿನಗಳಲ್ಲಿ ರಾಜ್ಯ ಸಚಿವ ಸಂಪುಟಕ್ಕೆ ಸಣ್ಣ ಪ್ರಮಾಣದ ಸರ್ಜರಿ ಆಗಲಿದೆ.**



2ನೇ ಹಂತದ ಸಚಿವ ಸಂಪುಟ ವಿಸ್ತರಣೆ ನಂತರ ಸಚಿವ ಸ್ಥಾನ ಸಿಗದ ಹಿರಿಯ ಶಾಸಕರುಗಳು ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿ, ಅತೃಪ್ತಿ ಹೊರ ಹಾಕಿದ್ದರು. ಆ ಸಂದರ್ಭದಲ್ಲಿ ಕೆಲ ಹಿರಿಯ ಶಾಸಕರನ್ನು ಭೇಟಿ ಮಾಡಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಿರಿಯ ಶಾಸಕರಿಗೆ ಸಚಿವ ಸ್ಥಾನದ ಭರವಸೆ ನೀಡಿ ಅವರ ಮನವೊಲಿಸಿದ್ದರು. ಹಿರಿಯ ಶಾಸಕರ ಅಸಮಾಧಾನ ಸ್ಫೋಟಗೊಂಡ ಬೆನ್ನಲ್ಲೆ ಹೈಕಮಾಂಡ್ ಜತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ಮಾಡಿ ಸಚಿವ ಸಂಪುಟಕ್ಕೆ ಸಣ್ಣ ಪ್ರಮಾಣದ ಸರ್ಜರಿ ಅಗತ್ಯ ಇರುವುದನ್ನು ಮನವರಿಕೆ ಮಾಡಿಕೊಟ್ಟಿದ್ದರು.

ಕಾಂಗ್ರೆಸ್ ಹೈಕಮಾಂಡ್ ಸಹ ಸಣ್ಣ ಪ್ರಮಾಣದ ಸರ್ಜರಿಗೆ ಒಪ್ಪಿಗೆ ನೀಡಿತ್ತು.ವಿಧಾನ ಮಂಡಲದ ಅಧಿವೇಶನ ಇದ್ದ ಕಾರಣ ಸಂಪುಟ ಸರ್ಜರಿ ವಿಳಂಬವಾಗಿತ್ತು.ಈಗ ಅಧಿವೇಶನ ಮುಗಿದ ಬೆನ್ನಲ್ಲೆ ಸಂಪುಟ ಸರ್ಜರಿಗೆ ವರಿಷ್ಠರ ಜತೆ ಚರ್ಚಿಸಿ ಮುಹೂರ್ತ ನಿಗದಿ ಮಾಡಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದು ಬೆಳಿಗ್ಗೆ ಬೆಂಗಳೂರಿನಿಂದ ದೆಹಲಿಗೆ ತೆರಳಿದರು. ಇಂದು ಸಂಜೆ ಇಲ್ಲವೇ ರಾತ್ರಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಸೇರಿದಂತೆ ಪಕ್ಷದ ಹಿರಿಯ ನಾಯಕರನ್ನು ಭೇಟಿ ಮಾಡಿ ಸಂಪುಟ ಸರ್ಜರಿಯ ಬಗ್ಗೆ ಚರ್ಚೆ ನಡೆಸುವರು. ಬರುವ ಸೋಮವಾರದೊಳಗೆ ಸಂಪುಟ ಸರ್ಜರಿಯಾಗುವುದು ಪಕ್ಕಾ ಆಗಿದೆ.

ಸಚಿವ ಸಂಪುಟದಲ್ಲಿ ಅಲ್ಪ ಪ್ರಮಾಣದ ಬದಲಾವಣೆಗೆ ಮುಂದಾಗಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಒಕ್ಕಲಿಗ ಸಮುದಾಯದ ಒಬ್ಬ ಸಚಿವರಿಂದ ರಾಜೀನಾಮೆ ಪಡೆದು ಆ ಸ್ಥಾನಕ್ಕೆ ವಿಜಯನಗರದ ಶಾಸಕ ಎಂ. ಕೃಷ್ಣಪ್ಪರವರನ್ನು ತರಲು ನಿರ್ಧರಿಸಿದ್ದಾರೆ. ಹಾಗೆಯೇ ಸಂಪುಟದಲ್ಲಿ ಖಾಲಿ ಇರುವ ಒಂದು ಸ್ಥಾನಕ್ಕೆ ಕುರುಬ ಸಮುದಾಯದ ಬಸವಣ್ಣ ನೀಲಣ್ಣ ಶಿವಣ್ಣನವರ್ ರವರನ್ನು ನೇಮಕ ಮಾಡುವ ಬಗ್ಗೆಯೂ ವರಿಷ್ಠರೊಡನೆ ಚರ್ಚೆ ನಡೆಸುವರು. ಸಂಪುಟದಲ್ಲಿ ಮಹಿಳಾ ಸಚಿವರು ಇರದ ಕಾರಣ ಮಹಿಳಾ ಶಾಸಕರೊಬ್ಬರಿಗೆ ಸಚಿವ ಸ್ಥಾನ ನೀಡುವ ಬಗ್ಗೆಯೂ ಹೈಕಮಾಂಡ್ ಜತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಲಿದ್ದಾರೆ ಎಂದು ಹೇಳಲಾಗಿದೆ.

ಇಂದು ಬೆಳಿಗ್ಗೆಯೇ ದೆಹಲಿಗೆ ತೆರಳಿದ ಡಿ.ಕೆ. ಶಿವಕುಮಾರ್ ರವರು ವರಿಷ್ಠರಿಂದ 3ನೇ ಹಂತದ ಸಂಪುಟ ವಿಸ್ತರಣೆಗೆ ಅನುಮತಿ ಪಡೆದು ಮುಹೂರ್ತ ನಿಗದಿ ಮಾಡಲಿದ್ದು, ಬಹುತೇಕ ಇನ್ನು 3–4 ದಿನಗಳಲ್ಲಿ ಸಂಪುಟ ವಿಸ್ತರಣೆಯಾಗಲಿದೆ. ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಒಬ್ಬ ಸಚಿವರ ಪದತ್ಯಾಗದ ಅಗತ್ಯವಿದ್ದು, ವಾಲ್ಮೀಕಿ ಹಗರಣಕ್ಕೆ ಸಂಬಂಧಿಸಿದಂತೆ ವಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿರುವ ಸಚಿವ ಬಿ. ನಾಗೇಂದ್ರರವರಿಂದ ರಾಜೀನಾಮೆ ಪಡೆದು ಆ ಸ್ಥಾನಕ್ಕೆ ಮಹಿಳಾ ಶಾಸಕಿಯೊಬ್ಬರನ್ನು ಸಚಿವರನ್ನಾಗಿ ನೇಮಕ ಮಾಡುವ ಬಗ್ಗೆಯೂ ಚರ್ಚೆಗಳು ನಡೆದಿದ್ದು, ಅಂತಿಮವಾಗಿ ಹೈಕಮಾಂಡ್ ಸಮ್ಮುಖದಲ್ಲೇ ಎಲ್ಲವೂ ಇತ್ಯರ್ಥವಾಗಲಿದೆ.

ಹಿರಿಯ ಶಾಸಕರಾಗಿರುವ ಎಂ. ಕೃಷ್ಣಪ್ಪ ರವರಿಗೆ ಸಚಿವ ಸ್ಥಾನ ನೀಡಲು ಒಕ್ಕಲಿಗ ಸಮುದಾಯದ ಸಚಿವರೊಬ್ಬರ ರಾಜೀನಾಮೆ ಕೊಡಿಸುವ ಅಗತ್ಯವಿದ್ದು, ಯಾರನ್ನು ರಾಜೀನಾಮೆ ಕೊಡಿಸಬೇಕು ಎಂಬ ಬಗ್ಗೆಯೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವರಿಷ್ಠರೊಡನೆ ಚರ್ಚೆ ನಡೆಸುವರು.

3ನೇ ಹಂತದ ಸಂಪುಟ ವಿಸ್ತರಣೆಯಲ್ಲಿ ವಿಜಯನಗರ ಶಾಸಕರಾದ ಎಂ. ಕೃಷ್ಣಪ್ಪರವರಿಗೆ ಸಚಿವ ಸ್ಥಾನ ಸಿಗುವುದು ಬಹುತೇಕ ಪಕ್ಕಾ ಎಂದು ಹೇಳಲಾಗಿದೆ. ನಿಗಮ ಮಂಡಳಿ ಬಗ್ಗೆಯೂ ಚರ್ಚೆ : ಸಚಿವ ಸ್ಥಾನ ಸಿಗದ ಹಿರಿಯ ಶಾಸಕರನ್ನು ನಿಗಮ ಮಂಡಳಿಗೆ ನೇಮಕ ಮಾಡುವ ಬಗ್ಗೆಯೂ ಚಿಂತನೆ ನಡೆದಿದ್ದು, 18 ತಿಂಗಳು ಅವಧಿ ಪೂರೈಸಿರುವ ನಿಗಮ ಮಂಡಳಿ ಅಧ್ಯಕ್ಷರುಗಳಿಂದ ರಾಜೀನಾಮೆ ಪಡೆದು ಆ ಸ್ಥಾನಕ್ಕೆ ಸಚಿವ ಸ್ಥಾನ ಸಿಗದ ಹಿರಿಯ ಶಾಸಕರು ಹಾಗೂ ಹೊಸ ಶಾಸಕರುಗಳನ್ನು ನೇಮಕ ಮಾಡುವ ಬಗ್ಗೆಯೂ ವರಿಷ್ಠರೊಡನೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಲಿದ್ದಾರೆ. 3ನೇ ಹಂತದ ಸಂಪುಟ ವಿಸ್ತರಣೆಯ ಬಳಿಕ ನಿಗಮ ಮಂಡಳಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ನೇಮಕ ಪ್ರಕ್ರಿಯೆಗಳನ್ನು ನಡೆಸಲು ವರಿಷ್ಠರಿಂದ ಡಿ.ಕೆ. ಶಿವಕುಮಾರ್ ಹಸಿರು ನಿಶಾನೆ ಪಡೆಯುವರು ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

1ನೇ ಪುಟದಿಂದ....

ಸರನ್, ಮುಜಫರ್‌ಪುರ, ವೈಶಾಲಿ, ಸೀತಾಮರ್ಹಿ ಹಾಗೂ ಶಿವಹರ್ ಜಿಲ್ಲೆಗಳಲ್ಲಿ ತೀವ್ರ ಕಟ್ಟೆಚ್ಚರ ಘೋಷಿಸಲಾಗಿದೆ. ಯಾವುದೇ ತುರ್ತು ಪರಿಸ್ಥಿತಿ ಎದುರಾದಲ್ಲಿ ಕಾರ್ಯಾಚರಣೆ ಕೈಗೊಳ್ಳಲು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳನ್ನು ಬೆಟ್ಟಿಯಾ, ಗೋಪಾಲ್‌ಗಂಜ್ ಹಾಗೂ ಮುಜಫರ್‌ಪುರದಲ್ಲಿ ನಿಯೋಜಿಸಲಾಗಿದೆ. ಸಶಸ್ತ್ರ ಸೀಮಾ ಬಲ್ ಕೂಡ ನೆರವಿಗೆ ಸಿದ್ಧವಾಗಿದೆ. ಜಲಸಂಪನ್ಮೂಲ ಇಲಾಖೆ ನದಿ ಪಾತ್ರದ ಒಡ್ಡುಗಳು, ತಗ್ಗು ಪ್ರದೇಶಗಳು ಹಾಗೂ ಸೇತುವೆಗಳ ಮೇಲ್ವಿಚಾರಣೆಯನ್ನು ತೀವ್ರಗೊಳಿಸಿದೆ. ಅಗತ್ಯವಿದ್ದಲ್ಲಿ ಸ್ಥಳಾಂತರಿಸಲು ಯೋಜನೆ ರೂಪಿಸಲಾಗಿದ್ದು, ದೋಣಿಗಳು, ಆಶ್ರಯ ತಾಣಗಳು ಹಾಗೂ ಸಮುದಾಯ ಅಡುಗೆಮನೆಗಳನ್ನು ಸಿದ್ಧಪಡಿಸಲಾಗಿದೆ. ಸಾರ್ವಜನಿಕ ಧ್ವನಿವರ್ಧಕಗಳ ಮೂಲಕ ಸಂತ್ರಸ್ತ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ಸಂದೇಶಗಳನ್ನು ಪ್ರಸಾರ ಮಾಡಲಾಗುತ್ತಿದೆ. ಪರಿಸ್ಥಿತಿಯನ್ನು ವೈಯಕ್ತಿಕವಾಗಿ ಮೇಲ್ವಿಚಾರಣೆ ಮಾಡುತ್ತಿರುವ ಮುಖ್ಯಮಂತ್ರಿ, ನೇಪಾಳದಲ್ಲಿ ಸಂಭವಿಸಿದ ಜೀವಹಾನಿಗೆ ತೀವ್ರ ಸಂತಾಪ ಸೂಚಿಸಿದ್ದಾರೆ. ಸಂಕಷ್ಟದಲ್ಲಿರುವ ಭಾರತೀಯರ ರಕ್ಷಣೆಗೆ ಕೇಂದ್ರ ಸರ್ಕಾರದೊಂದಿಗೆ ಕೈಜೋಡಿಸಿ ಸಾಧ್ಯವಿರುವ ಎಲ್ಲ ನೆರವು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅಧಿಕಾರಿಗಳು ಸಾರ್ವಜನಿಕರು ಆತಂಕಕ್ಕೊಳಗಾಗದೆ ಮುನ್ನೆಚ್ಚರಿಕೆ ವಹಿಸುವಂತೆ ಹಾಗೂ ಆಡಳಿತದಿಂದ ನೀಡಲಾಗುವ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಿದ್ದಾರೆ.

# ದೇಶಾದ್ಯಂತ 41 ಅಗತ್ಯ ವಸ್ತುಗಳ ಬೆಲೆ ಸ್ಥಿರತೆಗೆ ಮುಂದಾದ ಕೇಂದ್ರ

ವಿಜಯ ದುಂಬಿ ಸುದ್ದಿ....

**ನವದೆಹಲಿ: ಶ್ರಾವಣ ಬಂತೆಂದರೆ ಹಬ್ಬ–ಹರಿದಿನ, ಧಾರ್ಮಿಕ ಮಹೋತ್ಸವ ಹಾಗೂ ವಿವಾಹ ಸಮಾರಂಭಗಳ ಸಂಭ್ರಮ ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ಸಹಜವಾಗಿಯೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುವ ಸಾಧ್ಯತೆ ಇರುತ್ತದೆ. ಆದರೆ, ಈ ಬಾರಿ ಹಬ್ಬಗಳ ಋತುವಿನ ಆರಂಭದಿಂದಲೇ ಬೆಲೆ ಸ್ಥಿರತೆಗೆ ಕೇಂದ್ರ ಸರ್ಕಾರ ಆದ್ಯತೆ ನೀಡಿದೆ.**

ನಾಗರ ಪಂಚಮಿ, ವರಮಹಾಲಕ್ಷ್ಮಿ, ಗಣೇಶ ಚತುರ್ಥಿ, ದಸರಾ ಹಾಗೂ ದೀಪಾವಳಿಯಂತಹ ಹಬ್ಬಗಳ ಸಂದರ್ಭದಲ್ಲಿ ಹಾಲು, ಬೇಳೆಕಾಳು, ತರಕಾರಿ ಸೇರಿದಂತೆ 41 ಬಗೆಯ ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ನಿಯಂತ್ರಿಸಲು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರ ನೇತೃತ್ವದಲ್ಲಿ ಸರ್ಕಾರ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ. ಓಅಅಈ, ಓಂಈಇಆ, ಕೇಂದ್ರೀಯ ಭಂಡಾರ್ ಹಾಗೂ ಇತರ ಚಿಲ್ಲರೆ ಮಾರಾಟ ಮಳಿಗೆಗಳ ಮೂಲಕ ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಅಗತ್ಯ ವಸ್ತುಗಳು ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಇದಕ್ಕೆ ನಿದರ್ಶನವೆಂಬಂತೆ ಈರುಳ್ಳಿ ಬೆಲೆ ನಿಯಂತ್ರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರ, ನಾಸಿಕ್‌ನಿಂದ ದೇಶದ ಐದು ಪ್ರಮುಖ ನಗರಗಳಿಗೆ ಕಾಂದಾ ಎಕ್ಸ್‌ಪ್ರೆಸ್ ರೈಲು ಮೂಲಕ ಈರುಳ್ಳಿ ಪೂರೈಕೆಗೆ ಚಾಲನೆ ನೀಡಿದೆ.

35ಕ್ಕೆ ಈರುಳ್ಳಿ ಲಭ್ಯ ಈಗಾಗಲೇ ದೆಹಲಿಯ ಮಾರುಕಟ್ಟೆಗಳಲ್ಲಿ ಕೆಜಿಗೆ ?35ರ ದರದಲ್ಲಿ ಈರುಳ್ಳಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಲಾಗಿದೆ. ಮೊಬೈಲ್ ವಾಹನಗಳು, ಓಅಅಈ, ಓಂಈಇಆನ ಚಿಲ್ಲರೆ ಮಾರಾಟ ಮಳಿಗೆಗಳು, ಸಫಲ್ ಹಾಗೂ ಕೇಂದ್ರೀಯ ಭಂಡಾರ್ ಮಳಿಗೆಗಳ ಮೂಲಕವೂ ಇದೇ ದರದಲ್ಲಿ ಈರುಳ್ಳಿ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಮುಂಬರುವ ತಿಂಗಳುಗಳಲ್ಲಿ ಸಾಕಷ್ಟು ಲಭ್ಯತೆ ಖಚಿತಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಬಫರ್ ಸ್ಟಾಕ್‌ನಿಂದ ಈರುಳ್ಳಿ ಪೂರೈಸುತ್ತಿದೆ.

2026–27ನೇ ಸಾಲಿನ ಬೆಲೆ ಸ್ಥಿರೀಕರಣ ನಿಧಿ (ಕಖಈ) ಬಫರ್‌ಗಾಗಿ 2 ಲಕ್ಷ ಮೆಟ್ರಿಕ್ ಟನ್ ರಬಿ ಈರುಳ್ಳಿ ಖರೀದಿಸುವ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಪೈಕಿ ಓಂಈಇಆ ಮತ್ತು ಓಅಅಈ ಮೂಲಕ



ಮೇ 15ರಿಂದ ಬಫರ್‌ಗಾಗಿ ಸುಮಾರು 1.21 ಲಕ್ಷ ಮೆಟ್ರಿಕ್ ಟನ್ ಈರುಳ್ಳಿ ಖರೀದಿಸಲಾಗಿದೆ. ಕೇಂದ್ರೀಯ ಗೋದಾಮು ನಿಗಮ (ಅಫಅ) 2026–27ನೇ ಸಾಲಿನಲ್ಲಿ ಕಖಈ ಈರುಳ್ಳಿ ಬಫರ್‌ಗಾಗಿ ಇದೇ ಮೊದಲ ಬಾರಿಗೆ ಶೇಖರಣಾ ಸಂಸ್ಥೆಯಾಗಿ ತೊಡಗಿಸಿಕೊಂಡಿದೆ.

ಎಲ್ಲಾ ರಾಜ್ಯಗಳಲ್ಲೂ ಬೆಲೆ ಏರಿಕೆ ಮೇಲೆ ನಿಗಾ ಎಲ್ಲ ರಾಜ್ಯಗಳಲ್ಲೂ ಈರುಳ್ಳಿ ಬೆಲೆ, ಬೇಡಿಕೆ ಹಾಗೂ ಲಭ್ಯತೆಯನ್ನು ಕೇಂದ್ರ ಸರ್ಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಾಕಷ್ಟು ಸರಬರಾಜು ಮಾಡುವ ಜತೆಗೆ ಅನಗತ್ಯ ಬೆಲೆ ಏರಿಕೆಯನ್ನು ತಡೆಯಲು ಮಧ್ಯಸ್ಥಿಕೆ ವಹಿಸಿ ಗ್ರಾಹಕರ ಹಿತಾಸಕ್ತಿ ರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಓಣಂ, ಗಣೇಶ ಚತುರ್ಥಿ, ದುರ್ಗಾ ಪೂಜೆ, ದಸರಾ, ದೀಪಾವಳಿ ಹಾಗೂ ವಿವಾಹ ಋತು ಸೇರಿದಂತೆ ಹಬ್ಬದ ಅವಧಿಯಲ್ಲಿ ಅನಗತ್ಯ ಬೆಲೆ ಏರಿಳಿತ ತಡೆಯಲು ಬಫರ್ ಸ್ಟಾಕ್‌ನಿಂದ ಈರುಳ್ಳಿ ಪೂರೈಸಲಾಗುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ನಾಸಿಕ್‌ನಿಂದ ನವದೆಹಲಿಗೆ ಕಾಂದಾ ಎಕ್ಸ್‌ಪ್ರೆಸ್ ರೈಲು ಮೂಲಕ ಈರುಳ್ಳಿ ಸಾಗಣೆ ಆರಂಭಿಸಲಾಗಿದೆ. ಮೊಬೈಲ್ ವ್ಯಾನ್, ಮಳಿಗೆಗಳಲ್ಲಿ ಚಿಲ್ಲರೆ ಮಾರಾಟ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಬಫರ್ ಈರುಳ್ಳಿಯನ್ನು ಗ್ರಾಹಕ ಕೇಂದ್ರಗಳಿಗೆ ಸಕಾಲಿಕವಾಗಿ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ. ಓಅಅಈ, ಓಂಈಇಆ ಹಾಗೂ ಕೇಂದ್ರೀಯ ಭಂಡಾರ್ ಮೂಲಕ ಒಟ್ಟು 122 ಮಳಿಗೆಗಳು ಮತ್ತು 90 ಮೊಬೈಲ್ ವ್ಯಾನ್‌ಗಳಲ್ಲಿ ಈರುಳ್ಳಿ ಚಿಲ್ಲರೆ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ.

ಕಾಂದಾ ಎಕ್ಸ್‌ಪ್ರೆಸ್ ಈಗಾಗಲೇ ನಾಸಿಕ್‌ನಿಂದ ದೆಹಲಿ ತಲುಪಿದ್ದು, ಚೆನ್ನೈ, ಕೋಲ್ಕತ್ತಾ, ಎರ್ನಾಕುಲಂ, ಗುವಾಹಟಿ, ವಾರಣಾಸಿ, ಲಕ್ನೋ, ಪಾಟ್ನಾ, ಚಂಡೀಗಢ, ಜಮ್ಮು ಮತ್ತು ಅಮೃತಸರಕ್ಕೆ ರಸ್ತೆ ಸಾರಿಗೆ ಮೂಲಕ ಈರುಳ್ಳಿ ಸಾಗಿಸಲಾಗುತ್ತಿದೆ. 579 ಕೇಂದ್ರಗಳಲ್ಲಿ ದೈನಂದಿನ ಮೇಲ್ವಿಚಾರಣೆ ದೇಶೀಯ ಮಾರುಕಟ್ಟೆಯಲ್ಲಿ ಈರುಳ್ಳಿ, ಬೇಳೆಕಾಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರುಮುಖವಾದ ಸಂದರ್ಭದಲ್ಲಿ ನಿರಂತರ ಮೇಲ್ವಿಚಾರಣೆ ನಡೆಸುವಂತೆ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ನಿರ್ದೇಶನ ನೀಡಿದ್ದಾರೆ.

ಅದರಂತೆ ದೇಶಾದ್ಯಂತ 579 ಕೇಂದ್ರಗಳಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆ ಒಟ್ಟು 41 ಬಗೆಯ ಅಗತ್ಯ ವಸ್ತುಗಳ ಪೂರೈಕೆ, ಬೇಡಿಕೆ, ಸರಬರಾಜು ಹಾಗೂ ಬೆಲೆಗಳ ಮೇಲೆ ನಿಗಾ ವಹಿಸಿದೆ. ನಿರಂತರ ಮೇಲ್ವಿಚಾರಣೆ ನಡೆಸುವ ಮೂಲಕ ಬೆಲೆ ಸ್ಥಿರತೆಗೆ ಆದ್ಯತೆ ನೀಡಲಾಗಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಟೊಮೆಟೊ, ಆಲೂಗಡ್ಡೆ ಹಾಗೂ ಕಡಲೆಬೇಳೆಯ ಬೆಲೆ ಕಳೆದ ವರ್ಷಕ್ಕೆ ಹೋಲಿಸಿದರೆ ಕಡಿಮೆಯಾಗಿದೆ. ತೊಗರಿ, ಕಡಲೆ, ಮಸೂರ್, ಉದ್ದು ಹಾಗೂ ಹೆಸರುಕಾಳು ಸೇರಿದಂತೆ ಪ್ರಮುಖ ದ್ವಿದಳ ಧಾನ್ಯಗಳು ಮತ್ತು ಟೊಮೆಟೊ, ಆಲೂಗಡ್ಡೆಯಂತಹ

VIJYA DUMBI KANNADA DAILY EDITED,PUBLISHED AND OWNED BY,VIJYA PRiNTED AT MANJESHA,U#74,4TH,MAIN,7TH,CROSS,NEARCHOWDESHARI TEMPALE KAVERINAGARA,MAHADEVAPURA,POST BANGALORU KARNATAKAPUBLISHED Hosapalya Byrasandra Modalakote Po , Nelamangala to bengaluru rurala Karnataka 562123 EDITOR VIJYA